ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

ತರಬೇತಿ ಸಾಹಿತ್ಯ ಕೈಪಿಡಿ

ಜ್ಞಾನ ಭಂಡಾರ

ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ

ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಚಿಕ್ಕಮಗಳೂರು

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

ತರಬೇತಿ ಸಾಹಿತ್ಯ ಕೈಪಿಡಿ

"ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ"

ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿಕ್ಕಮಗಳೂರು

2023–24

ಸಾಹಿತ್ಯ ರಚನಾ ತಂಡ

ಪರಿಕಲ್ಪನೆ

ಡಾ. ಬಿ.ಕೆ.ಎಸ್.ವರ್ಧನ್
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಮಾರ್ಗದರ್ಶನ
ಶ್ರೀ ಪ್ರಕಾಶ ಕೆ. ಎಸ್. ಪ್ರಾಚಾರ್ಯರು, ಡಯಟ್, ವಿಜಯಪುರ

ತರಬೇತಿ ಸಾಹಿತ್ಯ ರಚನಾ ಸಂಪನ್ಮೂಲ ತಂಡ :

1. ಶ್ರೀ ಹೊನ್ನೇಶ ಕುಮಾರ
   ಹಿರಿಯ ಉಪನ್ಯಾಸಕರು, ಡಯಟ್ ಚಿಕ್ಕಮಗಳೂರು
   ಚಿಕ್ಕಮಗಳೂರು
2. ಶ್ರೀಮತಿ ಶಾರದಮ್ಮ
   ಉಪನ್ಯಾಸಕರು, ಡಯಟ್
3. ರವೀಂದ್ರ. ಆರ್. ಡಿ, ಭಾಷಾ ಶಿಕ್ಷಕರು
   ಸರ್ಕಾರಿ ಪ್ರೌಢಶಾಲೆ-ಲೋಕನಾಥಪುರ.
   2
   ಕೊಪ್ಪ ತಾಲ್ಲೂಕು-ಚಿಕ್ಕಮಗಳೂರು
4. ಶ್ರೀ ಪೂರ್ಣೇಶ ವಿ.ಪಿ.
   ಸಿ.ಆರ್.ಪಿ, ಚಿಕ್ಕಮಗಳೂರು ನಗರ-
   ಚಿಕ್ಕಮಗಳೂರು ತಾ. ಮತ್ತು ಜಿಲ್ಲೆ.
5. ಶ್ರೀ ರಂಗನಾಥ.ಎಸ್.ಆರ್.
   ಸ.ಶಿ. ಸ.ಹಿ.ಪ್ರಾ.ಶಾಲೆ
   ತಲಮಕ್ಕಿ-ಕೊಪ್ಪ ತಾಲ್ಲೂಕು
6. ಶ್ರೀಮತಿ ಭಾರತಿ.ಎ.
   ಸ.ಶಿ. ಸ.ಕಿ.ಪ್ರಾ.ಶಾಲೆ, ಸಣ್ಣಕೆರೆ
   ಕೊಪ್ಪ ತಾಲ್ಲೂಕು.
7. ಶ್ರೀ ನಾಗರಾಜ.ಎಂ.ಎಸ್.
   ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ
   ಹೇರೂರು, ಕೊಪ್ಪ ತಾಲ್ಲೂಕು.

ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು

ನಿರ್ದೇಶಕರ ಆಶಯ ನುಡಿ

ಡಾ. ಬಿ.ಕೆ.ಎಸ್. ವರ್ಧನ್
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

ದಿನಾಂಕ: 25, ಮಾರ್ಚ, 2025 (ಡಾ. ಬಿ.ಕೆ.ಎಸ್. ವರ್ಧನ್)

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಸ್ಥೆಯ ದೂರದರ್ಶಿತ್ವ:

" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ: 08362441129 ಇ–ಮೇಲ್: sislepdirector.dwd@gmail.com

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ

ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ

ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.
- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು: ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.
- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೆಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ

ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ

ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ,

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು

ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,
ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.
ಮಿಕ್ಕುದೆಲ್ಲಂ ಅವಿದ್ಯೆ"
–– ರಾಷ್ಟ್ರಕವಿ ಕುವೆಂಪು.

ಪರಿವಿಡಿ

ಕ್ರ.ಸಂ	ವಿವರ	ಪುಟ ಸಂಖ್ಯೆ
1	ಗ್ರಂಥಾಲಯದೊಳಗೆ ಸುತ್ತಾಡುವ ಮುನ್ನ	1
2	ಕೈಪಿಡಿ ತೆರೆಯುವ ಮುನ್ನ	2–4
3	ವ್ಯಾಪ್ತಿ ಮತ್ತು ಉದ್ದೇಶಗಳು	5
4	ಶಾಲಾ ಗ್ರಂಥಾಲಯಗಳ ಅಭಿವೃದ್ಧಿ	6–7
5	ಗ್ರಂಥಾಲಯ ಹೀಗಿದ್ದರೆ ಚೆನ್ನ	8
6	ತರಗತಿ ಗ್ರಂಥಾಲಯ ಮತ್ತು ಓದುವ ಸ್ಥಳ	9
7	ಗ್ರಂಥಾಲಯ ದಾಖಲೆಗಳ ನಿರ್ವಹಣೆ	10
8	ಶಾಲಾ ಹಂತದ ಕ್ರಿಯಾ ಯೋಜನೆ ತಯಾರಿಕೆ	11–12
9	ಗ್ರಂಥಾಲಯ ಬಳಕೆಗೆ ಸಮುದಾಯದ ಸಹಭಾಗಿತ್ವ	13
10	ಶಾಲಾ ಗ್ರಂಥಾಲಯ ಚಟುವಟಿಕೆಗಳ ಅನುಪಾಲನೆ	14
11	ಅನುಬಂಧ-1 : ಗ್ರಂಥಾಲಯಕ್ಕೆ ಸಂಬಂಧಿಸಿದ ಪ್ರಮುಖ ವೆಬ್ಸೈಟ್ ಗಳು	15
12	ಅನುಬಂಧ-2 : ಗ್ರಂಥಾಲಯ ಕೈಪಿಡಿ ತರಬೇತಿ ಕಾರ್ಯಾಗಾರದ ವೇಳಾಪಟ್ಟಿ	16
13	ಅನುಬಂಧ-3 : ಪೂರ್ವ ಪರೀಕ್ಷೆ ಪ್ರಶ್ನೆ ಪತ್ರಿಕೆ	17–18
14	ಅನುಬಂಧ-4 : ಸಾಫಲ್ಯ ಪರೀಕ್ಷೆ ಪ್ರಶ್ನೆ ಪತ್ರಿಕೆ	19–20
15	ಅನುಬಂಧ-5 : ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಯ ಉತ್ತರಗಳು	21

ಗ್ರಂಥಾಲಯದೊಳಗೆ ಸುತ್ತಾಡುವ ಮುನ್ನ ...

ಶಿಕ್ಷಣ ಇಲಾಖೆಯಲ್ಲಿ ತರಬೇತಿಗಳು ಬದಲಾವಣೆಗೆ ಅನುಗುಣವಾಗಿ ನಡೆಯುತ್ತಿರುತ್ತವೆ. ಆದ್ದರಿಂದ ಪ್ರತಿಯೊಂದು ಹೊಸ ಪರಿಕಲ್ಪನೆಗೂ ತರಬೇತಿಯನ್ನು ನೀಡಲೇಬೇಕಾಗಿರುವುದು ಮತ್ತು ಆ ವಿಷಯದ ಮೂಲ ಉದ್ದೇಶವನ್ನು ತಲುಪಿಸಬೇಕಾಗಿರುವುದು ಅತ್ಯಂತ ಪ್ರಮುಖ ಕಾರ್ಯವಾಗಿರುತ್ತದೆ. ಯಾವುದೇ ಪರಿಕಲ್ಪನೆಯ ಮೂಲ ಉದ್ದೇಶ ಪರಿಚಯವಾಗದಿದ್ದಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ತಲುಪುವ ಸಂದರ್ಭದಲ್ಲಿ ಅದರ ಮೂಲ ಉದ್ದೇಶ ಮತ್ತು ತರಬೇತಿ ವಿಷಯದಲ್ಲಿ ಇರುವಂತಹ ಪ್ರಮುಖ ಅಂಶಗಳು ಮತ್ತು ಸಾಹಿತ್ಯ ರಚನೆಯ ದೃಷ್ಟಿಕೋನ ಇವೆಲ್ಲವೂ ಬಿಟ್ಟು ಹೋಗುವ ಸಾಧ್ಯತೆಗಳನ್ನು ಹೊಂದಿವೆ. ಆದ್ದರಿಂದ ಎಲ್ಲವನ್ನೂ ಯಥಾವತ್ತಾಗಿ ತಲುಪಿಸುವಂತಹ ಮಾಧ್ಯಮವಾಗಿ ತರಬೇತಿಯನ್ನು ಬಳಸಿಕೊಳ್ಳಲಾಗುತ್ತದೆ.

ಪ್ರತಿಯೊಂದು ತರಬೇತಿಗೂ ತನ್ನದೇ ಆದ ಮಹತ್ವ ಇರುತ್ತದೆ. ತರಬೇತಿಗೊಳಿಸುವುದು ಚಿನ್ನಕ್ಕೆ ಹೊಳಪನ್ನು ಕೊಟ್ಟಂತೆ ಒಂದು ಮುಖ್ಯವಾದ ಕಾರ್ಯವಾಗಿರುತ್ತದೆ. ನಮ್ಮೊಳಗಿರುವ ಹೊಳಪನ್ನು ಮತ್ತಷ್ಟು ಪ್ರಕಾಶಮಾನವಾಗಿ ಹೊಳೆಯುವಂತೆ ಮಾಡುವುದೇ ಈ ತರಬೇತಿಗಳ ಮೂಲ ಉದ್ದೇಶ ಎಂದರೆ ತಪ್ಪಾಗಲಾರದು. ನಿರ್ದಿಷ್ಟತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಪ್ರತಿಯೊಂದು ತರಬೇತಿಗಳಿಗೆ ಕೈಪಿಡಿ/ವಿನ್ಯಾಸದ ಅಗತ್ಯವಿದೆ.

ಗ್ರಂಥಾಲಯ ಎಂಬ ಓದುವ ಅಥವಾ ಓದಿನೆಡೆಗೆ ಮಕ್ಕಳನ್ನು ಸೆಳೆಯುವ ಅದ್ಭುತ ಪರಿಕಲ್ಪನೆಗೆ ಇಲಾಖೆ ವತಿಯಿಂದ ‘ **ಜ್ಞಾನಭಂಡಾರ** ’ ಎಂಬ ಕೈಪಿಡಿ ಒಂದನ್ನು ಸಿದ್ಧಪಡಿಸಿದ್ದು, ಅದರ ಪರಿಚಯಕ್ಕಾಗಿ ಮತ್ತು ಶಿಕ್ಷಕರೊಂದಿಗೆ ಈ ಕೈಪಿಡಿಯಲ್ಲಿರುವ ಅಂಶಗಳ ಪರಸ್ಪರ ವಿನಿಮಯಕ್ಕಾಗಿ ತರಬೇತಿ ವಿನ್ಯಾಸವನ್ನು ಸಿದ್ಧಪಡಿಸಲಾಗಿದೆ. ಇದರ ಸಹಾಯದಿಂದ ಗ್ರಂಥಾಲಯದ ಮಹತ್ವ, ಸ್ವರೂಪ, ಅಗತ್ಯತೆಗಳು ಮೊದಲಾದ ವಿಷಯಗಳನ್ನು ತಿಳಿದುಕೊಳ್ಳಬಹುದು. ನಾವೇಕೆ ಓದಬೇಕು? ನಮ್ಮ ಶಾಲೆಯ ಗ್ರಂಥಾಲಯ ಹೇಗಿರಬೇಕು? ಗ್ರಂಥಾಲಯ ವ್ಯವಸ್ಥೆ ಎಂದರೆ ಏನು? ಗ್ರಂಥಾಲಯದ ನಿರ್ವಹಣೆ ಹೇಗೆ? ಗ್ರಂಥಾಲಯದಲ್ಲಿ ಸಮುದಾಯದ ಪಾತ್ರವೇನು? ಎಲ್ಲದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಡಿಜಿಟಲ್ ಗ್ರಂಥಾಲಯದ ಅರ್ಥ, ಸ್ವರೂಪ, ಮಹತ್ವವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಈ ಕೈಪಿಡಿಯು ತರಬೇತಿಯನ್ನು ನೀಡುವವರಿಗೆ ದಾರಿ ದೀಪವಾದರೆ, ತರಬೇತಿಯನ್ನು ಪಡೆಯುವವರಿಗೆ ಒಂದು ಮಾರ್ಗದರ್ಶಿಯಂತೆ ಕಾರ್ಯನಿರ್ವಹಿಸುತ್ತದೆ. ಗ್ರಂಥಾಲಯಕ್ಕೆ ಸಂಬಂಧಿಸಿದಂತಹ ಪೂರಕ ಸಾಹಿತ್ಯಗಳು, ಹೆಚ್ಚುವರಿ ಅಧ್ಯಯನಕ್ಕೆ ಸಂಬಂಧಪಟ್ಟಂತಹ ಮಾಹಿತಿಗಳನ್ನು ಶಿಬಿರಾರ್ಥಿಗಳೊಂದಿಗೆ ಚರ್ಚಿಸಿ ಪಡೆದುಕೊಂಡು ನಮ್ಮ ಶಾಲಾ ಗ್ರಂಥಾಲಯಗಳನ್ನು ಸುಧಾರಿಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.



ಕೈಪಿಡಿ ತೆರೆಯುವ ಮುನ್ನ.....

" ದೇಹಕ್ಕೆ ವ್ಯಾಯಾಮವಿದ್ದಂತೆ ಮೆದುಳಿಗೆ ಓದು..."

ಪುಸ್ತಕಗಳನ್ನು ಓದುವ ಹವ್ಯಾಸವು ನಮ್ಮ ಮನಸ್ಸನ್ನು ವಿಕಸಿತಗೊಳಿಸುತ್ತದೆ. ಪುಸ್ತಕಗಳ ಭಂಡಾರ, ಜ್ಞಾನದ ಸಾಗರವೇ ಆದ ಗ್ರಂಥಾಲಯವು ಮನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕಿನ ಹಾದಿಯಲ್ಲಿ ನಮ್ಮನ್ನು ಮುನ್ನಡೆಸುತ್ತದೆ.

ಸಾಹಿತ್ಯವು ಎಲ್ಲರನ್ನೂ ಸೆಳೆಯುವಂಥಹದ್ದು. ಅದರಲ್ಲೂ ಸಾಹಿತ್ಯದ ವಿಶೇಷವಾದ ಮಜಲುಗಳು ಮಕ್ಕಳನ್ನು ಬಹುಬೇಗ ಸೆಳೆಯುತ್ತವೆ. ಉದಾಹರಣೆಗೆ ಚಿತ್ರ, ಹಾಡು, ಕಥೆ, ಕಾಮಿಕ್ಸ್, ಚಿತ್ರಕಥೆ ...

ಓದುವ ಅಭ್ಯಾಸ ಚಿಕ್ಕಂದಿನಲ್ಲೇ ಪ್ರಾರಂಭವಾದರೆ, ನಾವು ಬೆಳೆದಂತೆಲ್ಲ ಓದುವ ಅಭ್ಯಾಸವೂ ಬೆಳೆದು ಓದು ಒಂದು ಹವ್ಯಾಸವಾಗುತ್ತದೆ. ಆಗ ನಮ್ಮ ಯೋಚನೆ, ಚಿಂತನೆ, ವಿಚಾರ ಲಹರಿಗಳು ವೈಶಾಲ್ಯತೆಯನ್ನು ಪಡೆಯುತ್ತವೆ. ಜ್ಞಾನದ ಹರವು ವಿಸ್ತಾರವಾಗುತ್ತದೆ. ಈ ದೃಷ್ಟಿಯಿಂದ ನಾವೆಲ್ಲರೂ ಕಾರ್ಯಪ್ರವೃತ್ತರಾಗುವುದಾದರೆ ನಮ್ಮ ಮೊದಲ ಕಾರ್ಯ ಪ್ರಾರಂಭವಾಗಬೇಕಾಗಿರುವುದು ನಮ್ಮ ಹತ್ತಿರದ ಗ್ರಂಥಾಲಯಗಳಲ್ಲಿ...

ಈ ಮಾಡ್ಯೂಲಿನ ಪ್ರಮುಖ ಉದ್ದೇಶಗಳೆಂದರೆ...

* ಪ್ರಸ್ತುತ ಗ್ರಂಥಾಲಯ ವ್ಯವಸ್ಥೆ ಮತ್ತು ಬಳಕೆಯ ದೃಷ್ಟಿಕೋನವನ್ನು ಬದಲಾಯಿಸುವುದು.
* ಗ್ರಂಥಾಲಯ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗೀದಾರರ ಪಾತ್ರವನ್ನು ಅರಿಯುವುದು.
* ಗ್ರಂಥಾಲಯ ಮತ್ತು ಕಲಿಕೆಯ ಚಟುವಟಿಕೆ ಸಮನ್ವಯ ಹೊಂದಿರುವುದನ್ನು ಅರ್ಥಮಾಡಿಕೊಳ್ಳುವುದು.
* ೨೧ನೇ ಶತಮಾನದ ಕೌಶಲ್ಯಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಲು ಹೊಸ ಅವಕಾಶಗಳನ್ನು ತೆರೆದಿಡುವುದು...
* ಗ್ರಂಥಾಲಯ ಚಟುವಟಿಕೆಗಳ ಅನುಪಾಲನೆಯನ್ನು ಕ್ರಮಬದ್ಧಗೊಳಿಸುವುದು.

ಬದಲಾದ ಹೊಸ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಓದುವ ಆಸಕ್ತಿಯನ್ನು, ಗ್ರಂಥಾಲಯ ವ್ಯವಸ್ಥೆಯನ್ನು ನೋಡುವ, ಬಳಸುವ ಹಾಗೂ ನಿರ್ವಹಿಸುವ ರೀತಿಗಳಲ್ಲಿ ಬದಲಾವಣೆಯನ್ನು ತಂದುಕೊಳ್ಳಬೇಕಾಗಿರುವುದು ಇಂದಿನ ಅನಿವಾರ್ಯವಾಗಿದೆ...

- ಹಾಗಾದರೆ ನಮ್ಮ ಗ್ರಂಥಾಲಯಗಳ ಸ್ವರೂಪದಲ್ಲಿ ಏನಾದರೂ ಬದಲಾವಣೆ ಆಗಬೇಕಾಗಿದೆಯೇ?
- ಒಂದು ವ್ಯವಸ್ಥಿತ ಗ್ರಂಥಾಲಯದ ಲಕ್ಷಣಗಳೇನು?
- ತಕ್ಷಣದಲ್ಲಿ ಆಗಬೇಕಾಗಿರುವ ಬದಲಾವಣೆಗಳೇನು?
- ನಮ್ಮ ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವಲ್ಲಿ ತೊಡಗಿಸಿಕೊಳ್ಳಬೇಕಾದ ಭಾಗೀದಾರರು ಯಾರು?
- ನಮ್ಮ ಗ್ರಂಥಾಲಯದ ಅಭಿವೃದ್ಧಿಯಲ್ಲಿ ಭಾಗೀದಾರರ ಪಾತ್ರವೇನು?

ಇವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಮಾಡ್ಯೂಲ್ ಅತ್ಯಂತ ಪರಿಣಾಮಕಾರಿಯಾಗಿದೆ.

ಈ ಮಾಡ್ಯೂಲನ್ನು ಓದಿದ ನಂತರ ಅಥವಾ ತರಬೇತಿಯನ್ನು ಪಡೆದ ನಂತರ ನಾವೆಲ್ಲರೂ ಮೊದಲು ಗಮನಿಸಬೇಕಾದ್ದು ನಮ್ಮ ಶಾಲೆಗಳ ಗ್ರಂಥಾಲಯಗಳ ವಸ್ತುಸ್ಥಿತಿಯನ್ನು. ಇದು ಶಾಲೆಯ ಜ್ಞಾನಾಭಿವೃದ್ಧಿಯ ನಿಜವಾದ ಕಾರ್ಯಕ್ಷೇತ್ರ ಎಂದರೆ ಅತಿಶಯವೇನಲ್ಲ. ಮಕ್ಕಳು ತಾವು ಕಲಿತ ಜ್ಞಾನವನ್ನು ಶಾಲೆಯ ಒಳಗೂ ಮತ್ತು ಹೊರಗೂ ಸಂಯೋಜಿಸಿ ತಮ್ಮ ಜ್ಞಾನವನ್ನು ಮರಳಿ ಕಟ್ಟಿಕೊಳ್ಳುವುದೇ ಶಿಕ್ಷಣ ಎಂದರೆ ತಪ್ಪಲ್ಲ. ಮಕ್ಕಳು ಶಾಲೆಯಲ್ಲಿ ಪಡೆದ ಜ್ಞಾನವನ್ನು ಗ್ರಂಥಾಲಯದಲ್ಲಿ ಅಥವಾ ಗ್ರಂಥಾಲಯದಲ್ಲಿ ಪಡೆದ ಜ್ಞಾನವನ್ನು ತಮ್ಮ ದಿನನಿತ್ಯದ ಬದುಕಿನಲ್ಲಿ ಸಂಯೋಜಿಸಿ ಅವರ ಬದುಕನ್ನು ಅರ್ಥಪೂರ್ಣವಾಗಿ ಕಟ್ಟಿಕೊಳ್ಳುವ ಗುರಿಯೆಡೆಗೆ ಸಾಗುವ ಯಾನಕ್ಕೆ ಮೊದಲ ಅನುಭವವನ್ನು ನೀಡಬೇಕಾದ್ದು ಗ್ರಂಥಾಲಯದಲ್ಲಿಯೇ ಅಲ್ಲವೇ…?

ಈ ಮಾಡ್ಯೂಲ್ ಗ್ರಂಥಾಲಯದ ಪ್ರಾಮುಖ್ಯತೆ, ಉಪಯೋಗ, ಬಳಕೆ, ಹೊಸ ಅವಕಾಶಗಳು ಹಾಗೂ ಅದರ ನಿರ್ವಹಣೆಯ ಬಗ್ಗೆ ಸಮಗ್ರ ಮಾಹಿತಿಯನ್ನು ಹಂಚಿಕೊಳ್ಳುತ್ತದೆ. ನಮ್ಮ ನಮ್ಮ ಶಾಲೆಗಳಲ್ಲೂ ಒಂದು ಉತ್ತಮವಾದ, ವ್ಯವಸ್ಥಿತವಾದ ಗ್ರಂಥಾಲಯವೊಂದನ್ನು ಹೊಂದುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಿದೆ. ಈ ಮಾಡ್ಯೂಲ್ ಅದರತ್ತ ಹೆಜ್ಜೆ ಹಾಕುವ ಎಲ್ಲರಿಗೂ ಒಂದು ದಾರಿಯನ್ನು ತೋರಿಸುತ್ತದೆ. ಕೆಲಸವೊಂದರ ಯಶಸ್ಸಿಗೆ ಆ ಕೆಲಸದ ಪ್ರಾರಂಭದಿಂದ ಮುಕ್ತಾಯದವರೆಗಿನ ನೀಲನಕ್ಷೆಯೊಂದರಂತೆ ಇದು ಕೆಲಸ ಮಾಡುತ್ತದೆ.

ಯಾವುದೇ ಮಾಡ್ಯೂಲ್ ಅಥವಾ ತರಬೇತಿಯ ಯಶಸ್ಸು ಅದರ ಅನುಷ್ಠಾನವನ್ನು ಅವಲಂಬಿಸಿದೆ. ನಮ್ಮ ಶಾಲೆಯ ಕಲಿಕಾ ಚಟುವಟಿಕೆಗಳು ಗ್ರಂಥಾಲಯದಲ್ಲಿ ನಡೆಯುವಂತಾದರೆ…ಇದು ನಿಜಕ್ಕೂ ಒಂದು ಉತ್ತಮ ಅನುಭವವನ್ನು ನೀಡಬಲ್ಲದು. **'ಪುಸ್ತಕಗಳೊಂದಿಗೆ ಮಕ್ಕಳು ಹಾಗೂ ಮಕ್ಕಳೊಂದಿಗೆ ಪುಸ್ತಕ'** ಇವೆರಡೂ ಎಲ್ಲಾ ದೃಷ್ಟಿಯಿಂದಲೂ ಉತ್ತಮ ಸಂಯೋಜನೆಯಾಗಬಲ್ಲವು.

ಕೊಠಾರಿ ಆಯೋಗದ "ಅಭಿಪ್ರಾಯದಂತೆ ದೇಶದ ಭವಿಷ್ಯವು ತರಗತಿಯ ನಾಲ್ಕು ಗೋಡೆಗಳ ನಡುವೆ ರೂಪುಗೊಳ್ಳುತ್ತದೆ" ಹಾಗಾದರೆ ಈ ನಾಲ್ಕು ಗೋಡೆಗಳು ನಮ್ಮ ಗ್ರಂಥಾಲಯದ ನಾಲ್ಕು ಗೋಡೆಗಳೇ ಆಗಿದ್ದರೆ ಎಷ್ಟು ಚಂದ ಅಲ್ಲವೇ….?

ಶಾಲೆಯಲ್ಲಿ ಶಿಕ್ಷಕರೊಬ್ಬರಿಗೆ ವಿರಾಮದ ಸಮಯ. ಅವರನ್ನು ಆ ಸಮಯದಲ್ಲಿ ಕಾಣಬೇಕೆಂದರೆ ಗ್ರಂಥಾಲಯಕ್ಕೇ ಹೋಗಬೇಕು. ಅವರು ಸದಾ ಪುಸ್ತಕಗಳ ನಡುವೆ ಕಳೆದು ಹೋಗಿರುತ್ತಾರೆ. ಅವರ ಮುಂದಿನ ಅವಧಿಗೆ ಬೇಕಾದ ತಯಾರಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕ ತಡಕಾಡುತ್ತಾರೆ. ಮುಖ್ಯಾಂಶಗಳ ಟಿಪ್ಪಣಿ ಮಾಡಿಕೊಳ್ಳುತ್ತಾರೆ. ಓದುತ್ತಾರೆ... ಓದಿಸುತ್ತಾರೆ. ಪ್ರತಿದಿನ ಓದಿನ ಮೂಲಕ ಮಕ್ಕಳ ಮನರಂಜಿಸುತ್ತಾರೆ. ಕುತೂಹಲ ಕೆರಳಿಸಿ ಓದಿನೆಡೆಗೆ ಆಕರ್ಷಿಸುತ್ತಾರೆ. ತಮ್ಮ ಈ ಅಭ್ಯಾಸದಿಂದ ಮಕ್ಕಳಿಗೆ ಓದುವುದನ್ನು ಹವ್ಯಾಸವಾಗಿಸಿ, ಒಂದು ಓದುಗ ಸಮುದಾಯವನ್ನೇ ಸೃಷ್ಟಿಸಿದ್ದಾರೆ... ವಿದ್ಯಾರ್ಥಿಗಳ **ಸ್ಫೂರ್ತಿಯ ಸೆಲೆಯಾಗಿದ್ದಾರೆ.** ಅವರೆಂದರೆ ಊರಿಗೆಲ್ಲಾ ಅಚ್ಚುಮೆಚ್ಚು...

ಹಾಗಾದರೆ ನಾವೂ ಇವರಂತಾಗಬೇಕೆ? ದಯಮಾಡಿ ಈ ಮಾಡ್ಯೂಲ್ ಓದೋಣ....

ನಿರ್ವಹಣೆ : ಶ್ರೀಮತಿ/ಶ್ರೀ ____________________

ಶೀರ್ಷಿಕೆ : ಶಾಲಾ ಗ್ರಂಥಾಲಯ ಏನು? ಏಕೆ? ಹೇಗೆ?

ಸಾಮಗ್ರಿಗಳು : ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ :

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ
ಆತ್ಮ ಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ ಮಂಕುತಿಮ್ಮ||

-ಡಿ.ವಿ.ಜಿ

ಶಾಲಾ ಗ್ರಂಥಾಲಯವೆಂದರೆ ಮಕ್ಕಳ ಓದುವ ಆಸಕ್ತಿಯನ್ನು ಅರಳಿಸುವ, ಮಕ್ಕಳ ಕುತೂಹಲವನ್ನು ತಣಿಸುವ, ಮಕ್ಕಳಿಗೆ ಜ್ಞಾನದ ಪೂರಕ ವ್ಯವಸ್ಥೆಯಾಗಿರುವ ಇದು ಪುಸ್ತಕಗಳ ಮಳಿಗೆಯೂ ಹೌದು. ಜ್ಞಾನದ ಮಾಳಿಗೆಯೂ ಹೌದು...

ಮಾಹಿತಿಯನ್ನು ಪಡೆಯುವ, ಘಟನೆಗಳನ್ನು ಓದಿ ತಿಳಿಯುವ, ಸಂಗತಿಗಳನ್ನು ಸಂಗ್ರಹಿಸುವ, ಹುಡುಕುವ, ವಿಶ್ಲೇಷಿಸುವ, ವಿಮರ್ಶಿಸುವ, ಅಧ್ಯಯನ ಮಾಡುವ, ಅಭ್ಯಸಿಸುವ, ಮೌಲ್ಯಮಾಪನ ಮಾಡುವ ಹಾಗೂ ತನ್ನಿಷ್ಟದ ಅಭಿವ್ಯಕ್ತಿಯನ್ನು ಗೆಳೆಯರೊಂದಿಗೆ ಹಂಚಿಕೊಳ್ಳುವ, ಅದನ್ನು ಚಿತ್ರ, ಹಾಡು, ಕಥೆ, ಆಟ, ಬಣ್ಣ, ಅಕ್ಷರ ರೂಪಗಳಲ್ಲಿ ವ್ಯಕ್ತಪಡಿಸುವ ಒಂದು ಅಭೂತಪೂರ್ವ ವೇದಿಕೆ ಎಂದರೆ ಅದು ಶಾಲಾ ಗ್ರಂಥಾಲಯ...

ವ್ಯಾಪ್ತಿ :

ಮಕ್ಕಳ ಓದುವ ಕೌಶಲವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಶಾಲಾ ಗ್ರಂಥಾಲಯ ಮತ್ತು ಶಾಲೆಯಲ್ಲಿರುವ ಪುಸ್ತಕಗಳನ್ನು ಬಳಸಿಕೊಳ್ಳುವುದು.

ಉದ್ದೇಶಗಳು :

- ಶಾಲಾ ಗ್ರಂಥಾಲಯದ ಅರ್ಥ, ಮಹತ್ವ ಮತ್ತು ಸದ್ಯ ಲಭ್ಯವಿರುವ ವ್ಯವಸ್ಥೆಯ ಕುರಿತು ತಿಳಿಯುವುದು.
- ಮಕ್ಕಳ ಓದುವ ಅವಕಾಶವನ್ನು ವಿಸ್ತರಿಸುವುದು.
- ಶಾಲಾ ಗ್ರಂಥಾಲಯದ ಸದ್ಬಳಕೆ ಮಾಡಿಕೊಳ್ಳುವುದು.

ನಿರೀಕ್ಷಿತ ಫಲಿತಾಂಶ/ ಕಲಿಕಾ ಫಲಗಳು :

- ❖ ಶಾಲಾ ಗ್ರಂಥಾಲಯದ ಅರ್ಥವನ್ನು ತಿಳಿಯುವರು.
- ❖ ಶಾಲಾ ಗ್ರಂಥಾಲಯದ ಮಹತ್ವವನ್ನು ತಿಳಿಯುವರು.
- ❖ ಶಾಲೆಗಳಲ್ಲಿ ಲಭ್ಯವಿರುವ ಶಾಲಾ ಗ್ರಂಥಾಯಲದ ಸದ್ಯದ ವಸ್ತುಸ್ಥಿತಿಯನ್ನು ತಿಳಿಯುವರು.

ವಿಧಾನ : ಗುಂಪು ಚರ್ಚೆ

ಪ್ರಕಿಯೆ :

- ✓ ಪರಸ್ಪರ ಚರ್ಚೆಯ ಮೂಲಕ ಶಿಬಿರಾರ್ಥಿಗಳೊಂದಿಗೆ ಶಾಲಾ ಗ್ರಂಥಾಲಯದ ಅರ್ಥ, ಮಹತ್ವ ಮತ್ತು ವಸ್ತುಸ್ಥಿತಿಯ ಬಗ್ಗೆ ಅರ್ಥೈಸುವುದು.
- ✓ ವ್ಯವಸ್ಥಿತ ಶಾಲಾ ಗ್ರಂಥಾಲಯದಲ್ಲಿರಬೇಕಾದ ಲಕ್ಷಣಗಳನ್ನು ಪಟ್ಟಿ ಮಾಡಿಸುವುದು.
- ✓ ಶಿಬಿರಾರ್ಥಿಗಳಿಂದ ತಮ್ಮ ತಮ್ಮ ಶಾಲೆಗಳ ಶಾಲಾ ಗ್ರಂಥಾಲಯದ ವಸ್ತುಸ್ಥಿತಿಯ ಬಗ್ಗೆ ಮಾಹಿತಿಯನ್ನು ಪಡೆಯುವುದು. ಅವುಗಳ ಬದಲಾವಣೆಗೆ ಕೈಗೊಳ್ಳಬಹುದಾದ ತಕ್ಷಣದ ಕ್ರಮಗಳ ಬಗ್ಗೆ ಚರ್ಚಿಸುವುದು.
- ✓ ಅವಧಿಯ ಕೊನೆಯಲ್ಲಿ ಶಿಬಿರಾರ್ಥಿಗಳಿಂದ ಹಿಮ್ಮಾಹಿತಿ ಪಡೆಯುವುದು.

****

ದಿನ : ೦೧

ಅವಧಿ : ೦೨

ಸಮಯ : ೯೦ ನಿಮಿಷಗಳು (೧೧.೪೫ ರಿಂದ ೦೧.೧೫)

ನಿರ್ವಹಣೆ : ಶ್ರೀಮತಿ/ಶ್ರೀ _______________

ಶೀರ್ಷಿಕೆ : * ಶಾಲಾ ಗ್ರಂಥಾಲಯಗಳ ಅಭಿವೃದ್ಧಿ

ಸಾಮಗ್ರಿಗಳು : ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ:

" ಓದಿಕೊಂಡ ಪುಸ್ತಕ ಮತ್ತು ಕೊಂಡು ಓದಿದ ಪುಸ್ತಕ ಎಂದೂ ನಮ್ಮ ಕೈ ಬಿಡುವುದಿಲ್ಲ".

ಇತ್ತೀಚಿನ ದಿನಮಾನಗಳಲ್ಲಿ ಕಲಿಕೆ ಎಂಬುವುದು ಕೇವಲ ನಾಲ್ಕು ಗೋಡೆಗಳ ಮಧ್ಯೆ ಮಾತ್ರ ನಡೆಯುವ ಚಟುವಟಿಕೆಯಾಗಿ ಉಳಿದಿಲ್ಲ. ಕಲಿಕೆಗೆ ಹಲವಾರು ಆಯಾಮಗಳಿವೆ. ಹಲವಾರು ಸ್ಥಳಗಳಿವೆ. ಅಂತಹ ಅತ್ಯಮೂಲ್ಯ ಸ್ಥಳಗಳಲ್ಲಿ ಗ್ರಂಥಾಲಯ ಕೂಡ ಒಂದು. ಗ್ರಂಥಾಲಯದ ಅಭಿವೃದ್ಧಿ ನಮ್ಮ ಪ್ರಮುಖ ಜವಾಬ್ದಾರಿಯಾಗಿದೆ. ಆ ನಿಟ್ಟಿನಲ್ಲಿ ಸ್ಥಳೀಯರು ಗ್ರಾಮಸ್ಥರ ನೆರವಿನೊಂದಿಗೆ ಗ್ರಂಥಾಲಯಕ್ಕೆ ಒಂದು ಹೊಸ ರೂಪವನ್ನು ನೀಡುವುದು ಹಾಗೂ ಗ್ರಂಥಾಲಯದಲ್ಲಿನ ಚಟುವಟಿಕೆಗಳನ್ನು ಪಠ್ಯದೊಂದಿಗೆ, ಪಠ್ಯದಲ್ಲಿನ ಚಟುವಟಿಕೆಗಳನ್ನು ಗ್ರಂಥಾಲಯದೊಂದಿಗೆ ಸಮನ್ವಯಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ವ್ಯಾಪ್ತಿ :

ಕಲಿಕಾ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದರ ಮೂಲಕ ಕಲಿಕೆಯನ್ನು ಪರಿಣಾಮಕಾರಿಯಾಗಿಸುವುದು. ಶಾಲಾ ಗ್ರಂಥಾಲಯ, ಮಕ್ಕಳು ಮತ್ತು ಶಿಕ್ಷಕರು. (ಈ ಆಯಾಮದಲ್ಲಿ ಯೋಚಿಸುವಾಗ ಅವಕಾಶಗಳಿದ್ದಲ್ಲಿ ಆಯಾ ಗ್ರಾಮದ ಗ್ರಂಥಾಲಯಗಳು/ ಖಾಸಗಿ ಗ್ರಂಥಾಲಯಗಳನ್ನು ಬಳಸಿಕೊಳ್ಳಬಹುದಾಗಿದೆ.)

ಉದ್ದೇಶಗಳು :

- ಶಾಲಾ ಗ್ರಂಥಾಲಯವನ್ನೂ ಒಂದು ಕಲಿಕಾ ವೇದಿಕೆಯನ್ನಾಗಿಸುವುದು.
- ಹೊಸ ಜ್ಞಾನ ಮತ್ತು ಅದರ ವಿವಿಧ ಆಯಾಮಗಳನ್ನು ಪರಿಚಯಿಸುವುದು.
- ಕಲಿಕೆಯನ್ನು ಸಾಮುದಾಯಿಕ ಅಂಶವನ್ನಾಗಿ ಮಾರ್ಪಡಿಸುವುದು.

ನಿರೀಕ್ಷಿತ ಫಲಿತಾಂಶ/ ಕಲಿಕಾ ಫಲಗಳು:

- ಮಕ್ಕಳು ಎಲ್ಲಿ ಬೇಕಾದರೂ ಕಲಿಯಬಹುದೆಂಬ ಭಾವನೆಯನ್ನು ಬೆಳೆಸಿಕೊಳ್ಳುವರು.
- ಶಿಕ್ಷಕರು ಕಲಿಸುವ ಅವಕಾಶಗಳ ಬಳಕೆ ಮತ್ತು ಹೊಸತನದ ಕಲಿಕಾ ಅನುಭವವನ್ನು ನೀಡುವ ಅವಕಾಶವನ್ನು ಪಡೆಯುವರು.

ವಿಧಾನ: ಗುಂಪು ಚರ್ಚೆ/ಪ್ರಾತ್ಯಕ್ಷಿಕೆ.

ಪ್ರಕಿಯೆ :

- ಶಿಬಿರಾರ್ಥಿಗಳನ್ನು ಸಂಖ್ಯೆಗನುಗುಣವಾಗಿ ಗುಂಪು ಮಾಡಿ, ಕಲಿಕೆಯ ವಿವಿಧ ಆಯಾಮಗಳು, ಒಂದು ಕಲಿಕಾ ವೇದಿಕೆಯಾಗಿ ಶಾಲಾ ಗ್ರಂಥಾಲಯ ಇತ್ಯಾದಿ ವಿವಿಧ ವಿಷಯಗಳ ಆಧಾರದಲ್ಲಿ ಗುಂಪು ಚರ್ಚೆ ನಡೆಸಿ ಅವರ ಅನುಭವ, ಅಭಿಪ್ರಾಯಗಳು ಮತ್ತು ಸಲಹಾತ್ಮಕ ಅಂಶಗಳನ್ನು ಪಟ್ಟಿ ಮಾಡಿಸಿ, ಮಂಡಿಸಲು ಅವಕಾಶ ಮಾಡಿಕೊಡುವುದು.
- ಸ್ಥಳೀಯರು ಗ್ರಾಮಸ್ಥರ ನೆರವಿನೊಂದಿಗೆ ಗ್ರಂಥಾಲಯದೊಂದಿಗೆ ಇತರ ಕಲಿಕಾ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ಕಲಿಯಲು ಅವಕಾಶವನ್ನು ಸೃಷ್ಟಿಸಬಹುದಾದ ವಿಷಯಗಳ ಬಗ್ಗೆ ಎಲ್ಲರ ಅನುಭವಗಳನ್ನು ಚರ್ಚಿಸಿ ಪಟ್ಟಿ ಮಾಡಿಸುವುದು. ಸಂಬಂಧಿತ ಚಟುವಟಿಕೆಗಳನ್ನು ಮಾಡಿಸುವುದು.
- ತರಬೇತಿ ನಡೆಯುತ್ತಿರುವ ಸ್ಥಳಕ್ಕೆ ಹತ್ತಿರದಲ್ಲಿರುವ ಗ್ರಂಥಾಲಯ ಅಥವಾ ಪುಸ್ತಕಗಳ ವಿಶೇಷವಾದ ಸಂಗ್ರಹಗಳಿರುವ ಸ್ಥಳಗಳಿಗೆ ಭೇಟಿ ನೀಡುವುದು.

****

ದಿನ: 01

ಅವಧಿ: 03 (02.00 ರಿಂದ 03.30)

ನಿರ್ವಹಣೆ: ಶ್ರೀಮತಿ/ಶ್ರೀ _______________

ಸಮಯ : 90 ನಿಮಿಷಗಳು

ಶೀರ್ಷಿಕೆ: ಗ್ರಂಥಾಲಯ ಹೀಗಿದ್ದರೆ ಚೆನ್ನ...

ಸಾಮಗ್ರಿಗಳು : ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ:

ಮಕ್ಕಳು ಹಿರಿಯರನ್ನು ಅನುಕರಿಸುತ್ತಾರೆ ಹಾಗೂ ಅನುಸರಿಸುತ್ತಾರೆ. ಶಾಲೆಯಲ್ಲಿ ಶಿಕ್ಷಕರು ಅಥವಾ ಮನೆಯಲ್ಲಿ ಪೋಷಕರು ತಮ್ಮ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದ ಪುಸ್ತಕಗಳನ್ನು ತೆಗೆದುಕೊಂಡು ಓದಲು ಪ್ರಾರಂಭಿಸಿದರೆ, ಮಕ್ಕಳು ಕೂಡ ಓದಿನತ್ತ ಒಲವು ತೋರುತ್ತಾರೆ. ಮಕ್ಕಳಿಗೆ ಓದುವಿಕೆಯನ್ನು ಮೋಜಿನ ಚಟುವಟಿಕೆಯಾಗಿ ಪರಿವರ್ತಿಸಲು ಚಿತ್ರಸಹಿತ ಪುಸ್ತಕಗಳು ಉತ್ತಮ ಆಯ್ಕೆಯಾಗಿವೆ. ಇಂತಹ ಚಿತ್ರಸಹಿತ ಪುಸ್ತಕಗಳು ಮಕ್ಕಳ ಸೃಜನಶೀಲತೆಯನ್ನು ಹೊರತೆಗೆಯುವುದಲ್ಲದೆ, ಅವರ ಶಬ್ದಭಂಡಾರವನ್ನು ಹೆಚ್ಚಿಸಿ ಜ್ಞಾನದ ಪರಿಧಿಯನ್ನು ವಿಸ್ತರಿಸಲು ಸಹಾಯ ಮಾಡುತ್ತವೆ.

ವ್ಯಾಪ್ತಿ:

ಓದುವಿಕೆಗೆ ಪೂರಕವಾಗಿ ಗ್ರಂಥಾಲಯ ಬಳಕೆ ಬಗ್ಗೆ ಚರ್ಚೆ...

ಉದ್ದೇಶಗಳು:

- ಏಕೆ ಓದಬೇಕು? ಎಂದು ಅರ್ಥೈಸಿಕೊಳ್ಳುವುದು.
- ಓದಿಗೆ ದಾರಿಗಳನ್ನು ತಿಳಿಯುವುದು.
- ಮಕ್ಕಳಿಗೆ ಪುಸ್ತಕ ವಿತರಿಸುವಲ್ಲಿ ಅನುಸರಿಸಬೇಕಾದ ಅಂಶಗಳನ್ನು ಗಮನಿಸುವುದು.
- ಪುಸ್ತಕದ ಆಯ್ಕೆಯಲ್ಲಿ ಸ್ವತಂತ್ರ ನೀಡಿಕೆ ಬಗ್ಗೆ ಗಮನಿಸುವುದು.

ನಿರೀಕ್ಷಿತ ಕಲಿಕಾ ಫಲಗಳು:

- ಏಕೆ ಓದಬೇಕು? ಎಂದು ತಿಳಿಯುವರು.
- ಓದಿನ ದಾರಿಗಳನ್ನು ತಿಳಿಯುವರು.
- ಮಕ್ಕಳಿಗೆ ವಿತರಿಸುವಲ್ಲಿ ಅನುಸರಿಸಬೇಕಾದ ಅಂಶಗಳನ್ನು ಗಮನಿಸುವರು.
- ಸ್ವತಂತ್ರವಾಗಿ ಪುಸ್ತಕ ಆಯ್ಕೆ ಮಾಡಿಕೊಳ್ಳುವರು.

ವಿಧಾನ: ಗುಂಪು ಚರ್ಚೆ

ಪ್ರಕ್ರಿಯೆ: * ಗುಂಪು ಚರ್ಚೆಯ ಮೂಲಕ ಓದಿನ ದಾರಿಗಳನ್ನು ಪಟ್ಟಿ ಮಾಡುವುದು.

* ಮಕ್ಕಳಿಗೆ ಪುಸ್ತಕ ವಿತರಣೆ ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ಚರ್ಚಿಸುವುದು.

* ಮಕ್ಕಳಿಗೆ ಪುಸ್ತಕಗಳ ಸ್ವತಂತ್ರ ಆಯ್ಕೆಗೆ ಅನುವು ಮಾಡಿಕೊಡುವುದು ಹೇಗೆ? ಎಂದು ಚರ್ಚಿಸಿ ಅಂಶಗಳನ್ನು ಪಟ್ಟಿ ಮಾಡುವುದು.

* ಪಟ್ಟಿ ಮಾಡಿದ ಅಂಶಗಳನ್ನು ಮಂಡನೆ ಮಾಡುವುದು.

ದಿನ: 01

ಅವಧಿ : 04 (03.45 ರಿಂದ 05.15)

ನಿರ್ವಹಣೆ: ಶ್ರೀಮತಿ/ಶ್ರೀ

ಸಮಯ : 90 ನಿಮಿಷ

ಶೀರ್ಷಿಕೆ:

- ತರಗತಿ ಗ್ರಂಥಾಲಯ ಮತ್ತು ಓದುವ ಸ್ಥಳ
- ಕಲಿಕೆಯ ಚಟುವಟಿಕೆಗಳು ಹಾಗೂ ಗ್ರಂಥಾಲಯ

ಸಾಮಗ್ರಿಗಳು: ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನೆ ಟಿಪ್ಪಣಿ :

- ಮಕ್ಕಳು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಓದುವ ಚಟುವಟಿಕೆಯನ್ನು ಅತ್ಯಂತ ಉಲ್ಲಾಸದಾಯಕವಾಗಿ ನಡೆಸಬೇಕು. ಗ್ರಂಥಾಲಯದಲ್ಲಿ ನಡೆಸುವ ಚಟುವಟಿಕೆಗಳು ಮಕ್ಕಳನ್ನು ಮತ್ತೆ ಮತ್ತೆ ಸೆಳೆಯುವಂತಹ ಗ್ರಂಥಾಲಯದೆಡೆಗೆ ಸೆಳೆಯುವಂತಿರಬೇಕು. ಮಕ್ಕಳಲ್ಲಿನ ಸೃಜನಶೀಲತೆಯನ್ನು ಹೊರತೆಗೆಯುವ, ಕ್ರಿಯಾಶೀಲತೆಯನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಶಿಕ್ಷಕರು ಆಯೋಜಿಸಬೇಕು.
- ವಿಷಯವನ್ನು ಸಂಗ್ರಹಿಸುವುದರ ಜೊತೆಗೆ, ಡಿಜಿಟಲ್ ಲೈಬ್ರರಿಗಳಲ್ಲಿ ಸಂಗ್ರಹಣೆಯಲ್ಲಿರುವ ವಿಷಯವನ್ನು ಸಂಘಟಿಸಲು, ಹುಡುಕಲು ಮತ್ತು ಹಿಂಪಡೆಯಲು ಸಾಧನಗಳನ್ನು ಒದಗಿಸುತ್ತವೆ. ಮಗು ವಿನೋದ ಮತ್ತು ಸಂವಾದಾತ್ಮಕವಾಗಿ ಕಲಿಯಲು 'ಕಿಡ್ ಝೋನ್' ಎಂಬ ಡಿಜಿಟಲ್ ಲೈಬ್ರರಿಯು ಸಹಾಯಕವಾಗುತ್ತದೆ.

ವ್ಯಾಪ್ತಿ:

- ❖ ಮಕ್ಕಳ ಕುತೂಹಲಗಳಿಗೆ ನೀರೆರೆಯುವ, ಜ್ಞಾನದ ಅನ್ವೇಷಣೆಗೆ ಪೂರಕವಾಗುವ ಕಲಿಕಾ ಪೂರಕಚಟುವಟಿಕೆಗಳ ಬಗ್ಗೆ ಚರ್ಚೆ.
- ❖ ತರಗತಿ ಗ್ರಂಥಾಲಯ ಮತ್ತು ಓದುವ ಸ್ಥಳ ಕುರಿತಾದ ಚರ್ಚೆ ನಡೆಸುವುದು. ಆ ಮೂಲಕ ತರಗತಿ ಗ್ರಂಥಾಲಯ ಮತ್ತು ಓದುವ ಸ್ಥಳವನ್ನು ಕುರಿತಾದ ಮಹತ್ವದ ಅರಿವು ಮೂಡಿಸುವುದು.
- ❖ ಡಿಜಿಟಲ್ ಲೈಬ್ರರಿಗಳ ಪ್ರಮುಖ ಪ್ರಯೋಜನವೆಂದರೆ ಮಾಹಿತಿ ಅಥವಾ ಗ್ರಂಥಗಳನ್ನು ಯಾರಾದರೂ, ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಪಡೆಯಬಹುದು.

ಉದ್ದೇಶ:

- ಗ್ರಂಥಾಲಯ ಆ್ಯಪ್ ಗಳ ಬಗ್ಗೆ ತಿಳಿಯುವುದು.
- ತರಗತಿ ಕಲಿಕಾ ಪ್ರಕ್ರಿಯೆಯಲ್ಲಿ ಓದುವ ಸ್ಥಳವನ್ನು ಸದುಪಯೋಗ ಪಡಿಸಿಕೊಳ್ಳುವುದು.
- ಡಿಜಿಟಲ್ ಲೈಬ್ರರಿ ಉಪಯೋಗಗಳ ಬಗ್ಗೆ ತಿಳಿಯುವುದು.
- ಗ್ರಂಥಾಲಯದಲ್ಲಿ ನಿರ್ವಹಿಸಬಹುದಾದ ಚಟುವಟಿಕೆಗಳು ಬಗ್ಗೆ ಚಚಿ□ಸಿ ಪ್ರಾತ್ಯಕ್ಷಿಕೆಯನ್ನು ನೀಡುವುದು.

ವಿಧಾನ: ಗುಂಪು ಚರ್ಚೆ

ಪ್ರಕ್ರಿಯೆ:

- ಗ್ರಂಥಾಲಯಗಳಿಗೆ ನೀಡಿರುವ ಡಿಜಿಟಲ್ ಲೈಬ್ರರಿ ಬಳಕೆ ಬಗ್ಗೆ ಚರ್ಚಿಸಿ ಅಂಶಗಳನ್ನು ಪಟ್ಟಿ ಮಾಡುವುದು.
- ಶಾಲೆಗಳಲ್ಲಿ ಇ-ಗ್ರಂಥಾಲಯ ಆ್ಯಪ್ ಬಳಗೆ ಬಗ್ಗೆ ಮಾಹಿತಿ ಕಲೆ ಹಾಕಿ ಬರೆಯುವುದು.
- ಡಿಜಿಟಲ್ ಲೈಬ್ರರಿ ಉಪಯೋಗಗಳನ್ನು ಪಟ್ಟಿ ಮಾಡುವುದು.
- ಗ್ರಂಥಾಲಯದಲ್ಲಿ ನಿರ್ವಹಿಸಬಹುದಾದ ಚಟುವಟಿಕೆಗಳು ಬಗ್ಗೆ ಚರ್ಚಿಸಿ ಪ್ರಾತ್ಯಕ್ಷಿಕೆಯನ್ನು ನೀಡುವುದು.

ದಿನ : ೦೨ **ಅವಧಿ** : ೦೧

ಸಮಯ : ೯೦ ನಿಮಿಷಗಳು (೧೦.೦೦ ರಿಂದ ೧೧.೩೦) **ನಿರ್ವಹಣೆ** : ಶ್ರೀಮತಿ/ಶ್ರೀ

ಶೀರ್ಷಿಕೆ : * ಗ್ರಂಥಾಲಯದ ದಾಖಲೆಗಳ ನಿರ್ವಹಣೆ.

* ಕ್ರಿಯಾ ಯೋಜನೆ

ಸಾಮಗ್ರಿಗಳು: ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ:

" ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಒಂದಲ್ಲಾ ಒಂದು ದಿನ ಫಲವನ್ನ ಕೊಟ್ಟೇ ಕೊಡುತ್ತದೆ "

- ದೇವನೂರು ಮಹಾದೇವ

ಅಂತೆಯೇ ನಾವು ಮಾಡುವ ಕೆಲಸ-ಕಾರ್ಯಗಳ ಕುರಿತು ಒಂದು ಸಮರ್ಪಕವಾದ ದಾಖಲೀಕರಣ ನಡೆಯದಿದ್ದರೆ, ಅದರ ಕಥೆಯೂ ಹೀಗೆಯೇ. ಆದ್ದರಿಂದ ನಮ್ಮ ಕೆಲಸಗಳನ್ನು ಅವಲೋಕಿಸುವಂತಹ ಒಂದು ದಾಖಲೆ ನಮ್ಮ ಬಳಿ ಇರುವುದು ಸೂಕ್ತ.

ಗ್ರಂಥಾಲಯದ ಬಳಕೆ ಮತ್ತು ಅಧ್ಯಯನದಂಥ ಮಹತ್ವದ ಕಾರ್ಯವನ್ನು ದಾಖಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಒಂದಷ್ಟು ಪೂರ್ವ ತಯಾರಿಯ ಅಗತ್ಯವೂ ಇದೆ. ಈ ಅವಧಿಯು ನಮಗೆ ಗ್ರಂಥಾಲಯ ನಿರ್ವಹಣೆಯ ಕುರಿತಾದ ಅಗತ್ಯ ದಾಖಲೆಗಳನ್ನು ಪರಿಚಯಿಸಿಕೊಡುತ್ತದೆ.

ವ್ಯಾಪ್ತಿ : ಆಯಾಯ ಗ್ರಂಥಾಲಯಗಳಲ್ಲಿ ನಿರ್ವಹಿಸಬಹುದಾದ ದಾಖಲೆಗಳು ಮತ್ತು ಅವುಗಳ ಬಗೆಗಿನ ಮಾಹಿತಿ. ಸದರಿ ದಾಖಲೆಗಳ ನಿರ್ವಹಣಾ ಕ್ರಮಗಳನ್ನು ಒಳಗೊಂಡಿದೆ.

ಉದ್ದೇಶಗಳು :

- ➢ ಶಾಲಾ ಗ್ರಂಥಾಲಯದಲ್ಲಿ ನಿರ್ವಹಿಸಬಹುದಾದ ದಾಖಲೆಗಳ ಕುರಿತು ತಿಳಿಯುವುದು.
- ➢ ಮಕ್ಕಳ ಓದುವ ಅವಕಾಶವನ್ನು ವಿಸ್ತರಿಸುವುದು.
- ➢ ಶಾಲಾ ಗ್ರಂಥಾಲಯದ ವಸ್ತುಸ್ಥಿತಿಯನ್ನು ಅರಿಯುವುದು.

ನಿರೀಕ್ಷಿತ ಫಲಿತಾಂಶ/ ಕಲಿಕಾ ಫಲಗಳು :

- ✓ ದಾಖಲೀಕರಣದ ಮಹತ್ವವನ್ನು ತಿಳಿಯುವರು.
- ✓ ಅಗತ್ಯ ದಾಖಲೆಗಳನ್ನು ಬಗ್ಗೆ ತಿಳಿಯುವರು.

ವಿಧಾನ : ಗುಂಪು ಚರ್ಚೆ/ ಪ್ರಶ್ನೋತ್ತರ.

ಪ್ರಕಿಯೆ :

- ❖ ಪರಸ್ಪರ ಚರ್ಚೆಯ ಮೂಲಕ ಶಿಬಿರಾರ್ಥಿಗಳೊಂದಿಗೆ ಶಾಲಾ ಗ್ರಂಥಾಲಯದ ಕುರಿತಾಗಿ ನಿರ್ವಹಿಸ ಬಹುದಾದ ದಾಖಲೆಗಳ ಬಗ್ಗೆ ಅರ್ಥೈಸುವುದು.
- ❖ ಶಾಲಾ ಗ್ರಂಥಾಲಯದಲ್ಲಿ ಇರುವ/ ಇರಬೇಕಾದ ದಾಖಲೆಗಳನ್ನು ಪಟ್ಟಿ ಮಾಡಿಸುವುದು.
- ❖ ಶಿಬಿರಾರ್ಥಿಗಳಿಂದ ತಮ್ಮ ತಮ್ಮ ಶಾಲೆಗಳ ಶಾಲಾ ಗ್ರಂಥಾಲಯದಲ್ಲಿ ನಿರ್ವಹಿಸುತ್ತಿರುವ ದಾಖಲೆಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು. ಅವುಗಳ ಬದಲಾವಣೆಗೆ/ ಸುಧಾರಣೆಗೆ ಕೈಗೊಳ್ಳಬಹುದಾದ ತಕ್ಷಣದ ಕ್ರಮಗಳ ಬಗ್ಗೆ ಚರ್ಚಿಸುವುದು.
- ❖ ಅವಧಿಯ ಕೊನೆಯಲ್ಲಿ ಶಿಬಿರಾರ್ಥಿಗಳಿಂದ ಹಿಮ್ಮಾಹಿತಿ ಪಡೆಯುವುದು.
- ❖ ವಾರ್ಷಿಕ ಯೋಜನೆಯನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸುವುದು.

ದಿನ : ೦೨

ಅವಧಿ : ೦೨

ಸಮಯ : ೯೦ ನಿಮಿಷಗಳು (೧೧.೪೫ ರಿಂದ ೦೧.೧೫)

ನಿರ್ವಹಣೆ : ಶ್ರೀಮತಿ/ಶ್ರೀ ____________________

ಶೀರ್ಷಿಕೆ : * ಶಾಲಾ ಹಂತದ ಕ್ರಿಯಾ ಯೋಜನೆಯ ತಯಾರಿ (ಶಿಬಿರಾರ್ಥಿಗಳಿಂದ)

* ಡಿಜಿಟಲ್ ಲೈಬ್ರರಿ ಭೇಟಿ/ ಪುಸ್ತಕ ಓದು.

ಸಾಮಗ್ರಿಗಳು: ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ :

ಸಿದ್ಧತೆ ಎಂಬುವುದು ನಮ್ಮ ಬದ್ಧತೆಯನ್ನು ಸಂಕೇತಿಸುತ್ತದೆ. ಯಾವುದೇ ಕೆಲಸಗಳನ್ನು ಆರಂಭಿಸುವ ಮೊದಲು ಮತ್ತು ಕಾರ್ಯ ನಡೆಯುವ ಸಂದರ್ಭದಲ್ಲಿ ಒಂದಷ್ಟು ತಯಾರಿಯ ಅಗತ್ಯವಿರುತ್ತದೆ. ಆ ಅಗತ್ಯತೆಯನ್ನು ಗಮನಿಸಿ ನಾವು ಕಾರ್ಯಪ್ರವೃತ್ತರಾಗಬೇಕು. ಆಗ ಮಾತ್ರ ನಮ್ಮ ಕಾರ್ಯದಲ್ಲಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಈ ತರಬೇತಿಯ ಸಮಯದಲ್ಲಿಯೂ ನಾವು ಮಾಡಬೇಕಾಗಿರುವ ಕೆಲಸವೆಂದರೆ ನಮ್ಮ ಶಾಲೆಯಲ್ಲಿ ಗ್ರಂಥಾಲಯ ಎಂಬ ಪರಿಕಲ್ಪನೆಗೆ ನಾವು ಇಡೀ ವರ್ಷ ಏನು ಮಾಡುತ್ತೇವೆ ಎಂಬ ದೂರಾಲೋಚನೆಯನ್ನು ಒಂದು ಯೋಜನೆಯ ರೂಪದಲ್ಲಿ ಸಿದ್ಧಪಡಿಸಬೇಕಾಗಿದೆ.

‘ ಡಿಜಿಟಲ್ ವರ್ಲ್ಡ್’ ಎಂಬುವುದು ಇತ್ತೀಚಿನ ದಿನಗಳಲ್ಲಿ ನಮ್ಮ ನಡುವೆಯೇ ರೂಪುಗೊಂಡಿರುವ ಹೊಸದೊಂದು ಜ್ಞಾನ ಪ್ರಪಂಚ. ಇದು ಇಂದು ಕೇವಲ ಅಗತ್ಯವಾಗಿ ಉಳಿಯದೇ ನಮ್ಮೆಲ್ಲರ ಅನಿವಾರ್ಯತೆಯಾಗಿದೆ. ಲೈಬ್ರರಿ/ಪುಸ್ತಕಗಳು/ಓದು ಎಂಬುವುದೂ ಇದರಿಂದ ಹೊರತಾಗಿಲ್ಲ. ಎಲ್ಲವೂ ಡಿಜಿಟಲೈಸ್ ಆಗಿಹೋಗಿವೆ. ನಾವೂ ಒಂದಿಷ್ಟು ಬದಲಾಗೋಣ. ಡಿಜಿಟಲ್ ಲೈಬ್ರರಿಗೆ ಭೇಟಿ ನೀಡೋಣ.

ಓದುವುದೆಂದರೆ ಹೊರಗಿನ ಆಗುಹೋಗುಗಳನ್ನು ತಿಳಿಯುವುದು ಮಾತ್ರವಲ್ಲ. ಬದಲಿಗೆ ಓದುವುದರ ಮೂಲಕ ನಮ್ಮೊಳಗಿನ ನಮ್ಮನ್ನು ತಿಳಿಯುವುದು. ಓದುವುದರಿಂದ ನಮ್ಮ ಆಲೋಚನಾ ಲಹರಿಯೇ ಬದಲಾಗುತ್ತದೆ.

ವ್ಯಾಪ್ತಿ :

* ನಮ್ಮ ಶಾಲೆಯ ಗ್ರಂಥಾಲಯದ ವಸ್ತುಸ್ಥಿತಿಗೆ ಅನುಗುಣವಾಗಿ ಯೋಜನೆಯನ್ನು ತಯಾರಿಸುವುದು.
* ಸಮೀಪದ ಡಿಜಿಟಲ್ ಲೈಬ್ರರಿಗೆ ಭೇಟಿಯನ್ನು ನೀಡುವುದು.
* ಶಿಬಿರಾರ್ಥಿಗಳನ್ನು ಲಭ್ಯವಿರುವ ಪುಸ್ತಕಗಳನ್ನು ಓದುವುದರ ಕಡೆಗೆ ಸೆಳೆಯುವುದು.

ಉದ್ದೇಶಗಳು :

- ✓ ನಮ್ಮ ನಮ್ಮ ಶಾಲೆಗಳಲ್ಲಿ ಕ್ರಿಯಾ ಯೋಜನೆಯೊಂದನ್ನು ತಯಾರಿಸುವುದು.
- ✓ ಡಿಜಿಟಲ್ ಲೈಬ್ರರಿಗೆ ಭೇಟಿಯನ್ನು ನೀಡುವ ಮೂಲಕ ಗ್ರಂಥಾಲಯ ವ್ಯವಸ್ಥೆಯ ಹೊಸ ಆಯಾಮವನ್ನು ಪರಿಚಯಿಸಿಕೊಡುವುದು.
- ✓ ಉತ್ತಮ ಪುಸ್ತಕಗಳನ್ನು ಓದಿ ಅದರಲ್ಲಿರುವ ಜ್ಞಾನವನ್ನು ನಮ್ಮದಾಗಿಸಿಕೊಳ್ಳುವುದು

ನಿರೀಕ್ಷಿತ ಫಲಿತಾಂಶ/ ಕಲಿಕಾ ಫಲಗಳು:

- ⁎ ನಮ್ಮ ಶಾಲೆಯಲ್ಲಿ ಒಂದು ಉತ್ತಮ ಗ್ರಂಥಾಲಯವನ್ನು ಹೊಂದುವುದು ಮತ್ತು ವ್ಯವಸ್ಥೆಗೊಳಿಸುವುದು.
- ⁎ ತಂತ್ರಜ್ಞಾನದ ಮೂಲಕ ಓದುವುದನ್ನು ರೂಢಿಸಿಕೊಳ್ಳುವುದು.

ವಿಧಾನ : ಪ್ರಾತ್ಯಕ್ಷಿಕೆ/ ಕ್ಷೇತ್ರ ಭೇಟಿ

ಪ್ರಕಿಯೆ :

- ➢ ಶಿಬಿರಾರ್ಥಿಗಳನ್ನು ಸೂಕ್ತ ಸಂಖ್ಯೆಯ ಗುಂಪುಮಾಡಿ ಗ್ರಂಥಾಲಯದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.
- ➢ ಶಿಬಿರಾರ್ಥಿಗಳೊಂದಿಗೆ ಸಮೀಪದ ಡಿಜಿಟಲ್ ಲೈಬ್ರರಿಗೆ ಭೇಟಿ ನೀಡುವುದು ಅಥವಾ ತಮ್ಮ ಇಷ್ಟದ ಪುಸ್ತಕಗಳನ್ನು ಓದಲು ೧೫-೨೦ ನಿಮಿಷಗಳ ಕಾಲ ಸಮಯಾವಕಾಶವನ್ನು ನೀಡುವುದು.
- ➢ ಶಿಬಿರಾರ್ಥಿಗಳು ಓದಿದ ಯಾವುದಾದರೊಂದು ಪುಸ್ತಕದ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸುವುದು.

ದಿನ : 02

ಅವಧಿ: 03 (02.00 ರಿಂದ 03.30)

ಸಮಯ : 90 ನಿಮಿಷಗಳು.

ನಿರ್ವಹಣೆ :- ಶ್ರೀಮತಿ/ ಶ್ರೀ ________________

ಶೀರ್ಷಿಕೆ:- * ಗ್ರಂಥಾಲಯ ಬಳಕೆಗೆ ಸಮುದಾಯ ಸಹಭಾಗಿತ್ವ.

ಸಾಮಗ್ರಿಗಳು: ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ:-

ನಾವು ಎರಡೂ ಕೈಗಳಲ್ಲಿ ದುಡಿಯುತ್ತೇವೆ. ಆದರೆ ಒಂದು ಕೈಯಲ್ಲಿ ಮಾತ್ರ ಉಣ್ಣುತ್ತೇವೆ. ಮತ್ತೊಂದು ಕೈಯ ದುಡಿಮೆಯನ್ನು ಸಮಾಜದ ಸತ್ಕಾರ್ಯಗಳಿಗೆ ವಿನಿಯೋಗಿಸಿದಾಗ ನಮ್ಮ ಬದುಕು ಸಾರ್ಥಕ್ಯವನ್ನು ಪಡೆಯುತ್ತದೆ. ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸ ರೂಢಿಸಲು ಶಾಲೆ ಮತ್ತು ಪೋಷಕರು ಅತಿ ಮುಖ್ಯ ಪಾತ್ರ ವಹಿಸಬೇಕಿದೆ. ಓದುವಿಕೆಯನ್ನು ಹವ್ಯಾಸವಾಗಿ ರೂಢಿಸಲು ಕುಟುಂಬ, ಸಮುದಾಯವು ವಿಶೇಷ ಮುತುವರ್ಜಿ ವಹಿಸಬೇಕಿದೆ.

ಸಮುದಾಯ ಮತ್ತು ಶಾಲೆಯ ನಡುವಿನ ಸಂಬಂಧವು ಮಕ್ಕಳ ಶಿಕ್ಷಣ ಮಟ್ಟವನ್ನು ಸುಧಾರಿಸುತ್ತದೆ. ಗ್ರಂಥಾಲಯ ಬಳಕೆಗೆ ಸಮುದಾಯವನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಶಾಲೆಗಳ ಜವಾಬ್ದಾರಿಯಾಗಿದೆ.

ವ್ಯಾಪ್ತಿ :-

- ಗ್ರಂಥಾಲಯದ ಸಮರ್ಪಕ ಬಳಕೆಗೆ ಸಮುದಾಯವನ್ನು ಬಳಸಿಕೊಳ್ಳುವುದು.
- ಸಮುದಾಯದ ಸಹಕಾರದಲ್ಲಿ ಗ್ರಂಥಾಲಯವನ್ನು ಅಭಿವೃದ್ಧಿಗೊಳಿಸುವುದು.

ಉದ್ದೇಶಗಳು:-

- ಗ್ರಂಥಾಲಯ ಬಳಕೆಗೆ ಸಮುದಾಯವನ್ನು ಬಳಸಿಕೊಳ್ಳುವುದನ್ನು ಅರಿಯುವುದು.
- ಗ್ರಂಥಾಲಯದ ಅಭಿವೃದ್ಧಿಗೆ ಸಮುದಾಯದ ಪ್ರತಿಸ್ಪಂದನೆಗಳನ್ನು ಬಳಸಿಕೊಳ್ಳುವುದು.

ನಿರೀಕ್ಷಿತ ಫಲಿತಾಂಶಗಳು/ಕಲಿಕಾ ಫಲಗಳು :-

- ಗ್ರಂಥಾಲಯ ಬಳಕೆಗೆ ಸಮುದಾಯವನ್ನು ಬಳಸಿಕೊಳ್ಳಲು ಸಮರ್ಥರಾಗುವರು.
- ಗ್ರಂಥಾಲಯ ಅಭಿವೃದ್ಧಿಗೆ ಸಮುದಾಯದ ಪ್ರತಿಸ್ಪಂದನೆಗಳನ್ನು ತಿಳಿಯುವರು.

ವಿಧಾನ: ಗುಂಪು ಚರ್ಚೆ

ಪ್ರಕ್ರಿಯೆ:

- ವಿಷಯ ವಿನಿಮಯದ ಮೂಲಕ ಶಾಲಾ ಗ್ರಂಥಾಲಯ ಬಳಕೆಗೆ ಸಮುದಾಯ ಬಳಸಿಕೊಳ್ಳುವುದನ್ನು ಅರ್ಥೈಸುವುದು.
- ಶಿಬಿರಾರ್ಥಿಗಳ ಅನುಭವ ಮತ್ತು ತಮ್ಮ ಶಾಲೆಗಳ ಗ್ರಂಥಾಲಯ ಬಳಕೆಗೆ ಸಮುದಾಯವನ್ನು ತೊಡಗಿಸಿಕೊಂಡಿರುವ ಮಾಹಿತಿಯನ್ನು ಹಂಚಿಕೊಳ್ಳಲು ಅವಕಾಶವನ್ನು ಕಲ್ಪಿಸುವುದು.
- ಅವಧಿಯ ಕೊನೆಯಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಅತ್ಯುತ್ತಮ ಗ್ರಂಥಾಲಯ ನಿರ್ಮಿಸಿರುವ ಮತ್ತು ಬಳಸುತ್ತಿರುವ ಅನುಭವಗಳನ್ನು ಅವಲೋಕಿಸುವುದು.

ದಿನ : 02

ಅವಧಿ : 04 (03.45 ರಿಂದ 05.15)

ಸಮಯ : 90 ನಿಮಿಷಗಳು

ನಿರ್ವಹಣೆ: ಶ್ರೀಮತಿ ಶ್ರೀ ______________________

ಶೀರ್ಷಿಕೆ: ಶಾಲಾ ಗ್ರಂಥಾಲಯ ಚಟುವಟಿಕೆಗಳ ಅನುಪಾಲನೆ ಹೀಗೆ ಮಾಡೋಣವೇ...

ಸಾಮಗ್ರಿಗಳು: ಪಿಪಿಟಿ, ಮಾರ್ಕರ್, ಪೆನ್ನು, ಬಿಳಿ ಕಾಗದ

ಪರಿಕಲ್ಪನಾ ಟಿಪ್ಪಣಿ:

ಶಾಲೆಗಳಲ್ಲಿ ಗ್ರಂಥಾಲಯ ಕಾರ್ಯ ಚಟುವಟಿಕೆಗಳು ಸುಗಮವಾಗಿ ನಡೆಯಲು ಸಮರ್ಪಕ ಮೇಲ್ವಿಚಾರಣೆ ಅಗತ್ಯವಾಗಿದೆ. ಶಾಲೆಗೆ ಭೇಟಿ ನೀಡುವ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಮತ್ತು ಭಾಗೀದಾರರು ಕಾರ್ಯಕ್ರಮಗಳ ಅನುಷ್ಠಾನವನ್ನು ನಿಯಮಿತವಾಗಿ ಪರಿಶೀಲಿಸಿ ಸೂಕ್ತ ಅನುಪಾಲನೆ ಮಾಡಿಸುವುದು ಅನಿವಾರ್ಯವಾಗಿದೆ. ಸೇವಾ ನಿರತರಿಗೆ ನಡೆಯುವ ಸಮಾಲೋಚನಾ ಸಭೆ, ತರಬೇತಿ ಇತ್ಯಾದಿಗಳಲ್ಲಿ ಅನುಪಾಲನೆಗೆ ಕ್ರಮವಹಿಸುವುದು ಸೂಕ್ತವಾಗಿದೆ.

ವ್ಯಾಪ್ತಿ:-

ಶಾಲಾ ಭೇಟಿ, ತರಬೇತಿ, ಸಮಾಲೋಚನಾ ಸಭೆ ಇತ್ಯಾದಿಗಳಲ್ಲಿ ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ.

ಉದ್ದೇಶಗಳು:-

- ಗ್ರಂಥಾಲಯ ನಿರ್ವಹಣೆ ಮತ್ತು ಬಳಕೆಯನ್ನು ಶಾಲಾಭೇಟಿ ಸಂದರ್ಭಗಳಲ್ಲಿ ಸೂಕ್ತವಾಗಿ ಪರಿಶೀಲಿಸುವುದು.
- ಸೇವಾನಿರತ ಶಿಕ್ಷಕರ ತರಬೇತಿ ಮತ್ತು ಸಮಾಲೋಚನಾ ಸಭೆಗಳಲ್ಲಿ ಗ್ರಂಥಾಲಯ ನಿರ್ವಹಣೆ ಮತ್ತು ಬಳಕೆಯ ಸ್ಥಿತಿಗತಿ ಅರಿತು ಅನುಪಾಲನೆಗೆ ಕ್ರಮವಹಿಸುವುದು.

ನಿರೀಕ್ಷಿತ ಫಲಿತಾಂಶ/ ಕಲಿಕಾ ಫಲಗಳು:-

- ❖ ಶಾಲಾ ಭೇಟಿ ಸಂದರ್ಭಗಳಲ್ಲಿ ಗ್ರಂಥಾಲಯ ನಿರ್ವಹಣೆ ಮತ್ತು ಬಳಕೆಯ ಪರಿಶೀಲಿಸಲು ಶಕ್ತರಾಗುವರು.
- ❖ ಸೇವಾನಿರತ ಶಿಕ್ಷಕರ ತರಬೇತಿ ಮತ್ತು ಸಮಾಲೋಚನಾ ಸಭೆಗಳಲ್ಲಿ ಗ್ರಂಥಾಲಯ ಸ್ಥಿತಿಗತಿ ಅರಿತು ಅನುಪಾಲನೆಗೆ ಮಾರ್ಗದರ್ಶನವನ್ನು ನೀಡಲು ಸಮರ್ಥರಾಗುವರು.

ವಿಧಾನ :- ಅನುಭವ ಹಂಚಿಕೆ ಮತ್ತು ಗುಂಪು ಚರ್ಚೆ

ಪ್ರಕ್ರಿಯೆ :-

- ಶಿಬಿರಾರ್ಥಿಗಳಿಗೆ ತಮ್ಮ ಶಾಲೆಗಳಲ್ಲಿ ಗ್ರಂಥಾಲಯ ನಿರ್ವಹಣೆ ಕುರಿತು ಅನುಷ್ಠಾನಾಧಿಕಾರಿಗಳು ಪರಿಶೀಲಿಸುವ ಮತ್ತು ಅನುಪಾಲಿಸುವ ಕ್ರಮಗಳನ್ನು ಪಟ್ಟಿ ಮಾಡಲು ತಿಳಿಸುವುದು.
- ಗುಂಪು ಚರ್ಚೆಯ ಮೂಲಕ ಅನುಷ್ಠಾನಾಧಿಕಾರಿಗಳು ಪರಿಣಾಮಕಾರಿ ಗ್ರಂಥಾಲಯ ನಿರ್ವಹಣೆ ಮತ್ತು ಬಳಕೆಯ ಕುರಿತು ಶಾಲಾ ಭೇಟಿಯ ಸಮಯಗಳಲ್ಲಿ ಹಾಗೂ ಸಮಾಲೋಚನಾ ಸಭೆಗಳಲ್ಲಿ ಅನುಪಾಲನೆಯನ್ನು ಮನದಟ್ಟು ಮಾಡುವುದು.
- ಅವಧಿಯ ಕೊನೆಯಲ್ಲಿ ಗ್ರಂಥಾಲಯ ಅನುಪಾಲನೆಗೆ ಪರಿಣಾಮಕಾರಿ ಅನುಷ್ಠಾನ ಕಾರ್ಯವನ್ನು ವಿವರಿಸುವುದರೊಂದಿಗೆ ಸಮನ್ವಯಗೊಳಿಸುವುದು.

ಅನುಬಂಧ-1 : ಗ್ರಂಥಾಲಯಕ್ಕೆ ಸಂಬಂಧಿಸಿದ ಪ್ರಮುಖ ವೆಬ್ಸೈಟ್ ಗಳು

WEBSITES	LINCS
ಕರ್ನಾಟಕ ಗ್ರಂಥಾಲಯ ಲಿಂಕ್	Home - Department of Public Libraries (karnataka.gov.in)
ಇ ಸಾರ್ವಜನಿಕ ಗ್ರಂಥಾಲಯ ಆಂಡ್ರಾಯ್ಡ್ ಆಪ್ ಲಿಂಕ್	https://play.google.com/store/apps/details?id=com.staging.mintbook
ಕರ್ನಾಟಕ ಸರ್ಕಾರದ ಆಪ್ ಗಳು	https://apps.karnataka.gov.in/
ಕರ್ನಾಟಕ ಸರ್ಕಾರದ ವೆಬ್ ಸೈಟ್ ಗಳು	https://dpl.karnataka.gov.in/english
ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ 1965	https://dpl.karnataka.gov.in/storage/pdf-files/KPL%20Act%201965%20Kannada.pdf
THE NATIONAL LIBRARY OF INDIA	https://www.nationallibrary.gov.in/
Raja Ram mohun Roy Library foundation	http://rrrlf.gov.in/Default.aspx
Karnataka all medium textbooks link	https://ktbs.kar.nic.in /New/index.html#!/textbook
All educational reasources diksha. link	https://play.google.com /store/apps/details?id=in.gov.diksha.app
Karnataka digital public library link	https://www.karnatakadigitalpubliclibrary.org /index-.html
NIEPA library link	https://niepa.ac.in/ About_Library.aspx
8 Websites Where You Can Read Free Books Online link	https://www.bookbub.com /blog/read-free-books-online-now
D.S.E.R.T. Library link	https://dsert.karnataka.gov.in/info- /Library/SERIC+library/en
AMARA CHITRA KATHA link	https://digital.amarchitrakatha.com /id005835217/
Open library.org link	https://openlibrary.org/subjects /kannada_literature
RIE mysore library link	https://riemysore.ac.in/library-useful-links
Stories For 10 Year Olds link	https://ririro.com /tag/10-year/
Stories For 5 Year Olds link c	https://ririro.com /tag/5-year/
Fun maths activities link	https://home.oxfordowl.co.uk /kids-activities/fun-maths-games-and-activities/#
25 Fun Math Activities For Your Classroom link	https://www.bytelearn.com /articles/fun-math-activities/
SRI Ramakrishna mission library link	https://rkmdelhi.org /library
en ways to use QR Codes in School Libraries link	https://www.qrcode-tiger.com /qr-codes-in-school-libraries
GURU CHETHANA DSERT WEBSITE	http://dsert.kar.nic.in /guruchethana/index.html
ಭಾರತ ಭಾರತಿ ಪುಸ್ತಕಗಳು link	https://www.sahityabooks.com /shop/bharata-bharati-kannada/bharata-bharati-kannada-600-books/
DR. BABASAHEB AMBEDKAR LIBRARY, MUMBAI	https://youtu.be/Iqcjnu4jBPA?si=YM1 WrKmwmKrH8wMt

ಅನುಬಂಧ-2 : ಗ್ರಂಥಾಲಯ ಕೈಪಿಡಿ ತರಬೇತಿ ಕಾರ್ಯಾಗಾರದ ವೇಳಾಪಟ್ಟಿ

ದಿನ	9.30 - 10.00	10.00 ರಿಂದ 11.30	11.30- 11.45	11.45 ರಿಂದ 1.15	1.15- 2.00	2.00 ರಿಂದ 3.30	3.30- 3.45	3.45 ರಿಂದ 5.15
01	ನೋಂದಣಿ, ಕಾರ್ಯ ಹಂಚಿಕೆ	1. ಶಾಲಾ ಗ್ರಂಥಾಲಯ- ಏನು? ಏಕೆ? ಹೇಗೆ?	ಪಾನೀಯ ವಿರಾಮ	2. ಶಾಲಾ ಗ್ರಂಥಾಲಯಗಳ ಅಭಿವೃದ್ಧಿ	ಊಟದ ವಿರಾಮ	3. ಗ್ರಂಥಾಲಯ ಹೀಗಿದ್ದರೆ ಚೆನ್ನ	ಪಾನೀಯ ವಿರಾಮ	4. ತರಗತಿ ಗ್ರಂಥಾಲಯ ಮತ್ತು ಓದುವ ಸ್ಥಳ 5. ಕಲಿಕೆಯ ಚಟುವಟಿಕೆಗಳು ಗ್ರಂಥಾಲಯ
02	ಪ್ರಾರ್ಥನೆ, ಹಿಮ್ಮಾಹಿತಿ ವರದಿ,	6. ಇ-ಬುಕ್ ಲೋಕದಲ್ಲೊಂದು ಸುತ್ತು-ಡಿಜಿಟಲ್ ಲೈಬ್ರರಿ		7. ಗ್ರಂಥಾಲಯದ ದಾಖಲೆಗಳ ನಿರ್ವಹಣೆ ಕ್ರಿಯಾ ಯೋಜನೆ		8. ಸಮುದಾಯದ ಸಹಭಾಗಿತ್ವದಲ್ಲಿ ಗ್ರಂಥಾಲಯ		9. ಶಾಲಾ ಗ್ರಂಥಾಲಯ ಚಟುವಟಿಕೆಗಳ ಅನುಪಾಲನೆ ಹೀಗೆ ಮಾಡೋಣವೇ?…

* ಪ್ರತೀ ಅವಧಿಯನ್ನು ನಿರ್ವಹಿಸುವ ಸಂಪನ್ಮೂಲ ವ್ಯಕ್ತಿಗಳ ಹೆಸರನ್ನು ಬರೆದುಕೊಳ್ಳುವುದು.

ಅನುಬಂಧ-3 : ಪೂರ್ವ ಪರೀಕ್ಷೆ ಪ್ರಶ್ನೆ ಪತ್ರಿಕೆ

ಶಿಕ್ಷಕರ ಹೆಸರು:..ದಿನಾಂಕ:..................

ವಿಳಾಸ..ಒಟ್ಟು ಸರಿ ಉತ್ತರಗಳು:

*** ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಗುರುತಿಸಿ.**

೧. ಗ್ರಂಥಾಲಯದ ನಿಜವಾದ ಉದ್ದೇಶ........

ಎ) ಬಿಡುವಿನ ವೇಳೆ ಸದುಪಯೋಗ. ಬಿ) ಓದುವುದರ ಕಡೆಗೆ ಸೆಳೆಯುವುದು.

ಸಿ) ಮಾಹಿತಿ ಸಂಗ್ರಹಿಸುವುದು. ಡಿ) ಪುಸ್ತಕಗಳ ಸಂಗ್ರಹವನ್ನು ವೀಕ್ಷಿಸುವುದು.

೨. ಗ್ರಂಥಾಲಯಕ್ಕೆ ಮಕ್ಕಳನ್ನು ಆಕರ್ಷಿಸಲು ಮಾಡಬಹುದಾದ ಬಹುಮುಖ್ಯ ಬದಲಾವಣೆ........

ಎ) ಸುಣ್ಣ, ಬಣ್ಣ ಬಳಿಯುವುದು. ಬಿ) ಹೊಸ ಪುಸ್ತಕ ಖರೀದಿಸುವುದು.

ಸಿ) ಮಕ್ಕಳ ಕೈಗಟುವಂತೆ ಪುಸ್ತಕಗಳನ್ನು ಜೋಡಿಸಿಡುವುದು. ಡಿ) ಗ್ರಂಥಪಾಲಕರನ್ನು ನೇಮಿಸುವುದು.

೩. ಶಾಲಾ ಗ್ರಂಥಾಲಯ ಅತ್ಯಂತ ಅವಶ್ಯಕ ಏಕೆಂದರೆ......

ಎ) ಹೊಸತನ್ನು ಕಲಿಯಲು ಬಿ) ಕಲಿತಿದ್ದನ್ನು ಅಭ್ಯಾಸ ಮಾಡಲು

ಸಿ) ಮಾಹಿತಿಯನ್ನು ಸಂಗ್ರಹಿಸಲು ಡಿ) ಮೇಲಿನ ಎಲ್ಲವೂ

4. ಒಂದು ಶಾಲೆಯಲ್ಲಿ ಗ್ರಂಥಾಲಯದ ಪುಸ್ತಕಗಳನ್ನು ಭದ್ರವಾಗಿ, ಅಂದವಾಗಿ ಯಾರಿಗೂ ನೀಡದೆ ಸಂಗ್ರಹಿಸಿಟ್ಟಿದ್ದಾರೆ. ಈ ಉಪಕ್ರಮವು...

ಎ) ತೋರಿಕೆಯ ಗ್ರಂಥಾಲಯ ಬಿ) ವ್ಯವಸ್ಥಿತ ಗ್ರಂಥಾಲಯ

ಸಿ) ಮಾದರಿ ಗ್ರಂಥಾಲಯ ಡಿ) ಬಳಸುತ್ತಿರುವ ಗ್ರಂಥಾಲಯ

5. ಪುಸ್ತಕಗಳು ಇಟ್ಟು ಹಾಳಾಗುವುದಕ್ಕಿಂತ ಬಳಸಿ ಹಾಳಾಗಲಿ. ಈ ಹೇಳಿಕೆಯ ಉದ್ದೇಶ...

ಎ) ಮಕ್ಕಳಿಗೆ ಪುಸ್ತಕಗಳನ್ನು ಓದಲು ಕೊಡುವುದು ಬಿ) ಮಕ್ಕಳಿಗೆ ಪುಸ್ತಕಗಳನ್ನು ನೋಡಲು ಮಾತ್ರ ಕೊಡಬೇಕು

ಸಿ) ಕಪಾಟಿನಲ್ಲಿ ವ್ಯವಸ್ಥಿತವಾಗಿ ಜೋಡಿಸುತ್ತಿರಬೇಕು ಡಿ) ಪುಸ್ತಕಗಳನ್ನು ಜಾಗೃತವಾಗಿ ಇಟ್ಟು ಅಧಿಕಾರಿಗಳಿಗೆ ತೋರಿಸಬೇಕು

6. ಗ್ರಂಥಾಲಯದ ಅವಶ್ಯಕತೆಯು...

ಎ) ಕಿರಿಯ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಬಿ) ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮಾತ್ರ

ಸಿ) ಪ್ರೌಢಶಾಲೆ ಗಳಿಗೆ ಮಾತ್ರ ಡಿ) ಎಲ್ಲಾ ಶಾಲೆಗಳಿಗೆ

7. ಶಾಲೆಯ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಜೋಡಿಸಿ ಇಡುವ ಉತ್ತಮ ವಿಧಾನವೆಂದರೆ...

ಎ) ಪ್ರಕಾರವಾರು (ಕಥೆ ಕವನ ಶಿಶುಗೀತೆ...) ಬಿ) ವಯೋಮಾನವಾರು

ಸಿ) ವಿಷಯವಾರು ಡಿ) ಪುಸ್ತಕಗಳ ಗಾತ್ರವಾರು

8. ಮಕ್ಕಳ ಓದಿನ ಪ್ರಾರಂಭವಾಗುವುದು...

ಎ) ಚಿತ್ರಗಳಿಂದ
ಬಿ) ಪದಗಳಿಂದ
ಸಿ) ಶಿಶು ಗೀತೆಗಳು
ಡಿ) ಕಥೆಗಳಿಂದ

9. 'ಆರನೇ ತರಗತಿಯ ಮಕ್ಕಳನ್ನು ವಿಜ್ಞಾನ ಶಿಕ್ಷಕರು ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿದ್ದಾರೆ.' ಮಕ್ಕಳು ಆಯ್ಕೆ ಮಾಡಿಕೊಳ್ಳಬಹುದಾದ ಪುಸ್ತಕಗಳು...

ಎ) ಕನ್ನಡದ ಜನಪ್ರಿಯ ಕಥೆಗಳು
ಬಿ) ಭೂಗೋಳ ಸಂಗಾತಿ
ಸಿ) ವಿಜ್ಞಾನದ ವಿಸ್ಮಯಗಳು
ಡಿ) ಸಮಾಜ ಸುಧಾರಕರು

10. ಮಕ್ಕಳಿಗೆ ಪುಸ್ತಕಗಳನ್ನು ನಿಗದಿತ ಸಮಯದಲ್ಲಿ ನೀಡಿ ಹಿಂಪಡೆದ ವಿವರಣೆ ಹೊಂದಿರುವ ವಹಿ...

ಎ) ಗ್ರಂಥಾಲಯ ದಾಸ್ತಾನು ವಹಿ
ಬಿ) ದಾಖಲಾತಿ ವಹಿ
ಸಿ) ಗ್ರಂಥಾಲಯ ಪುಸ್ತಕ ವಿತರಣಾ ವಹಿ
ಡಿ) ಇಂದಾ ವಕವಹಿ

11. ನಿರ್ದಿಷ್ಟ ಅವಧಿಯಲ್ಲಿ ಪ್ರಸಾರವಾಗುವ ಸುದ್ದಿ ಪತ್ರಿಕೆಗಳೇ...

ಎ) ನಿಯತಕಾಲಿಕೆಗಳು
ಬಿ) ಕಥೆ ಪುಸ್ತಕಗಳು
ಸಿ) ಕವನ ಸಂಕಲನಗಳು
ಡಿ) ಕಾದಂಬರಿಗಳು

12. ವಿವಿಧ ವಿಶ್ವವಿದ್ಯಾಲಯಗಳ ಸಂಶೋಧನಾ ಗ್ರಂಥಗಳನ್ನು ಅಭ್ಯಾಸವರಿಗೆ ಇದು ಸಹಾಯ ಮಾಡುತ್ತದೆ...

ಎ) ಡಿಜಿಟಲ್ ಲೈಬ್ರರಿ
ಬಿ) ಶೋಧ್ ಗಂಗಾ
ಸಿ) ಈ ಬುಕ್ಸ್
ಡಿ) ಈ ಪಬ್ಲಿಕ್ ಲೈಬ್ರರಿ

13. ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಬಹಳ ಮುಖ್ಯವಾಗಿ ಗಮನಿಸಲೇಬೇಕಾದ ಅಂಶ...

ಎ) ಶಿಶು ಸ್ನೇಹಿಯಾಗಿರುವುದು
ಬಿ) ಪುಸ್ತಕಗಳ ರಿಯಾಯಿತಿ
ಸಿ) ಪುಸ್ತಕಗಳ ಗಾತ್ರ
ಡಿ) ಇಲಾಖಾಧಿಕಾರಿಗಳ ನಿರ್ದೇಶನ

14. ಗ್ರಂಥಾಲಯದಲ್ಲಿ ನಿರ್ವಹಿಸುವ ಈ ಚಟುವಟಿಕೆಯು ಮಕ್ಕಳ ಮಾತನಾಡುವ ಕೌಶಲವನ್ನು ವೃದ್ಧಿಸುತ್ತದೆ...

ಎ) ಚಿತ್ರಕಲೆ ಮತ್ತು ಬಣ್ಣ ಹಚ್ಚುವುದು
ಬಿ) ಓದಿದ ಪುಸ್ತಕಗಳ ಬಗ್ಗೆ ಮಾತನಾಡುವುದು
ಸಿ) ಗುಂಪಿನಲ್ಲಿ ಓದುವುದು
ಡಿ) ಉಕ್ತಲೇಖನ

15. ಶಾಲಾ ಗ್ರಂಥಾಲಯದ ಪುಸ್ತಕದಲ್ಲಿ ಇದನ್ನು ಕಡ್ಡಾಯವಾಗಿ ನಮೂದಿಸಬೇಕು...

ಎ) ಕ್ರಮಸಂಖ್ಯೆ ಮತ್ತು ವರ್ಷ
ಬಿ) ದಾನಿಗಳ ಹೆಸರು
ಸಿ) ಮುಖ್ಯ ಶಿಕ್ಷಕರ ಹೆಸರು
ಡಿ) ಗ್ರಂಥಪಾಲಕರ ಹೆಸರು

ಶಿಬಿರಾರ್ಥಿಯ ಸಹಿ

ಅನುಬಂಧ-4 : ಸಾಫಲ್ಯ ಪರೀಕ್ಷೆ ಪ್ರಶ್ನೆ ಪತ್ರಿಕೆ

ಶಿಕ್ಷಕರ ಹೆಸರು:...ದಿನಾಂಕ:........................

ವಿಳಾಸ...ಒಟ್ಟು ಸರಿ ಉತ್ತರಗಳು:

....

ಸೂಚನೆಗಳು: ⁎ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಗುರುತಿಸಿ.

1. ಶಾಲಾ ಗ್ರಂಥಾಲಯ ವಿದ್ಯಾರ್ಥಿಗಳಿಗೆ...

ಎ) ಜ್ಞಾನ ಭಂಡಾರ ಬಿ) ಆಟ ಆಡುವ ಕೊಠಡಿ

ಸಿ) ವಿರಮಿಸುವ ಸ್ಥಳ ಡಿ) ಕೇವಲ ಪುಸ್ತಕಗಳನ್ನು ಸಂಗ್ರಹಿಸಿರುವ ಜಾಗ....

2. ತರಗತಿಯಲ್ಲಿ ಒಂದು ವಿಷಯದ ಬಗ್ಗೆ ವಿವರಣೆ ನೀಡಲಾಗಿದೆ. ಇದನ್ನು ಹೆಚ್ಚಿನ ಕಲಿಕೆಯೊಂದಿಗೆ ಪರಾಮರ್ಶನಕ್ಕೆ ಒಳಪಡಿಸುವಂತೆ ತಿಳಿಸಿದೆ. ಈಗ ವಿದ್ಯಾರ್ಥಿಗಳಿಗೆ ಸಹಾಯವಾಗುವ ಸ್ಥಳ...

ಎ) ಆಟದ ಮೈದಾನ ಬಿ) ಗ್ರಂಥಾಲಯ

ಸಿ) ಮನೆ ಡಿ) ಕ್ರೀಡಾಂಗಣ

3. ವಿದ್ಯಾರ್ಥಿಗಳಿಗೆ ದೈನಂದಿನ ಪ್ರಾಪಂಚಿಕ ಜ್ಞಾನವನ್ನು ವೃದ್ಧಿಸುವ ನಿಟ್ಟಿನಲ್ಲಿ ಒದಗಿಸಬಹುದಾದ ಅವಕಾಶ...

ಎ) ಪುಸ್ತಕಗಳು ಬಿ) ವೃತ್ತ ಪತ್ರಿಕೆಗಳು

ಸಿ) ಪಾಠ ಬೋಧನೆ ಡಿ) ಕ್ರೀಡಾಕೂಟಗಳು

4. ಗ್ರಂಥಾಲಯವನ್ನು ಅಭಿವೃದ್ಧಿಗೊಳಿಸಲು ಸಹಕರಿಸುವ ಭಾಗಿದಾರರು....

ಎ) ಶಿಕ್ಷಕರು ಬಿ) ಸಮುದಾಯ

ಸಿ) ಇಲಾಖೆ ಡಿ) ಮೇಲಿನ ಎಲ್ಲವೂ

5. ಪ್ರಾಥಮಿಕ ತರಗತಿಯ ಪುಸ್ತಕಗಳಿಗೆ ಪುಸ್ತಕ ಆಯ್ಕೆಮಾಡುವಾಗ ಗಮನಿಸಬೇಕಾದ ಅಂಶಗಳು...

ಎ) ಬಣ್ಣ, ಚಿತ್ರ, ಗಾತ್ರ. ಬಿ) ವಿಷಯ, ಚಿತ್ರ, ಗುಣಮಟ್ಟ.

ಸಿ) ತೂಕ, ಗಾತ್ರ, ವಿಷಯ. ಡಿ) ವಿಸ್ತರಣೆ, ಗಾತ್ರ, ಬೆಲೆ.

6. ಶೈಕ್ಷಣಿಕ ಗ್ರಂಥಾಲಯದ ಪ್ರಮುಖ ಗುರಿ ...

ಎ) ಬಹು ಆಯಾಮದ ಕಲಿಕೆಗೆ ಸಿದ್ಧಪಡಿಸುವುದು ಬಿ) ವಿಮರ್ಶಾತ್ಮಕ ಚಿಂತನೆಗೆ ಒಳಪಡಿಸುವುದು

ಸಿ) ಬರವಣಿಗೆಯಲ್ಲಿ ಅದ್ವಿತೀಯವಾಗಿಸುವುದು ಡಿ) ಪರೀಕ್ಷೆಯಲ್ಲಿ ಉತ್ತೀರ್ಣರನ್ನಾಗಿಸುವುದು

7. ಗ್ರಂಥಾಲಯ ಕೊಠಡಿಯಲ್ಲಿ ಸಾಮಾನ್ಯವಾಗಿ ಈ ರೀತಿಯ ಸೂಚನೆಯನ್ನು ಗಮನಿಸಬಹುದು...

ಎ) ಪುಸ್ತಕಗಳು ಅಮೂಲ್ಯ ಸಂಪತ್ತು, ಅವುಗಳನ್ನು ಹಾಳು ಮಾಡದಿರಿ

ಬಿ) ಇತರರಿಗೆ ತೊಂದರೆಯಾಗದಂತೆ ನಿಶ್ಯಬ್ಧವಾಗಿರಿ

ಸಿ) ಸಾಲಾಗಿ ಬನ್ನಿ ಡಿ) ಪಾದರಕ್ಷೆಗಳನ್ನು ಬಿಟ್ಟು ಒಳಗೆ ಬನ್ನಿ

8. ಪುಟ್ಟ ಮಕ್ಕಳಿಗೆ ಸಹಾಯವಾಗುವ ಡಿಜಿಟಲ್ ಲೈಬ್ರರಿ ....

ಎ) ಶೋಧ್ ಗಂಗಾ ಬಿ) ಕಿಡ್ ಜೋನ್

ಸಿ) ಇ-ಲೈಬ್ರರಿ ಡಿ) ಇ-ಬುಕ್ಸ್

9. ಶಾಲೆಯ ಪ್ರತಿ ತರಗತಿಯಲ್ಲಿಯೂ ವ್ಯವಸ್ಥೆ ಮಾಡುವ ಗ್ರಂಥಾಲಯ...

ಎ) ಸಾರ್ವಜನಿಕ ಗ್ರಂಥಾಲಯ ಬಿ) ತರಗತಿ ಗ್ರಂಥಾಲಯ

ಸಿ) ಶಾಲಾ ಗ್ರಂಥಾಲಯ ಡಿ) ಡಿಜಿಟಲ್ ಗ್ರಂಥಾಲಯ

10. ಹರಿದ, ಹಾಳಾದ, ಅನುಪಯುಕ್ತ ಪುಸ್ತಕಗಳ ವಿಲೇವಾರಿಗೆ....

ಎ) ಮುಖ್ಯ ಶಿಕ್ಷಕರು ಅನುಮತಿಸಬೇಕು ಬಿ) ಎಸ್.ಡಿ.ಎಂ.ಸಿ ನಿರ್ಣಯವಾಗಬೇಕು

ಸಿ) ಗ್ರಂಥ ಪಾಲಕರು ಅನುಮತಿಸಬೇಕು ಡಿ) ಬಿಇಒ ಒಪ್ಪಿಗೆ ನೀಡಬೇಕು

11. ಗ್ರಂಥಾಲಯದಲ್ಲಿ ಮಕ್ಕಳು ವೈಯಕ್ತಿಕವಾಗಿ ಮಾಡಬಹುದಾದ ಚಟುವಟಿಕೆ...

ಎ) ಗಟ್ಟಿಯಾಗಿ ಓದುವುದು ಬಿ) ಕಥಾನಿರೂಪಣೆ

ಸಿ) ನಾಟಕ ಡಿ) ರಸಪ್ರಶ್ನೆ

12. ಗ್ರಂಥಾಲಯಕ್ಕೆ ಪಡೆದ ಪುಸ್ತಕವನ್ನು ಈ ಅವಧಿಯಲ್ಲಿ ನಮೂದಿಸಬೇಕು

ಎ) ಗ್ರಂಥಾಲಯ ಪುಸ್ತಕ ವಿತರಣಾ ವಹಿ ಬಿ) ಪುಸ್ತಕ ಪರಿಚಯ ವಹಿ

ಸಿ) ದಿನಪತ್ರಿಕೆ ನಮೂದು ವಹಿ ಡಿ) ಗ್ರಂಥಾಲಯ ಪುಸ್ತಕ ದಾಸ್ತಾನು ವಹಿ

13. ವಿಶ್ವ ಗ್ರಂಥಾಲಯ ದಿನವನ್ನು ಆಚರಿಸುವುದು...

ಎ) ಏಪ್ರಿಲ್ ೨೩ ಬಿ) ಜೂನ್ ೫

ಸಿ) ಆಗಸ್ಟ್ ೧೨ ಡಿ) ನವೆಂಬರ್ ೧೪

14. ಗ್ರಂಥಾಲಯದ ವ್ಯವಸ್ಥಿತ ನಿರ್ವಹಣೆಯು ಇವರ ಜವಾಬ್ದಾರಿಯಾಗಿದೆ...

ಎ) ಮುಖ್ಯ ಶಿಕ್ಷಕರು ಬಿ) ತರಗತಿ ಶಿಕ್ಷಕರು

ಸಿ) ಗ್ರಂಥಾಲಯ ನಿರ್ವಾಹಕರು ಡಿ) ಮೇಲಿನ ಎಲ್ಲರೂ

15. 'ಪುಸ್ತಕ ಪರಿಚಯ' ಚಟುವಟಿಕೆಯನ್ನು ಶಾಲೆಯ ಎಲ್ಲ ಮಕ್ಕಳಿಗೆ ಏಕಕಾಲದಲ್ಲಿ ಈ ಸಂದರ್ಭದಲ್ಲಿ ನಡೆಸಬಹುದು...

ಎ) ಆಟದ ಸಮಯ ಬಿ) ಪಾಠದ ಸಮಯ

ಸಿ) ಪ್ರಾರ್ಥನಾ ಸಮಯ ಡಿ) ಊಟದ ಸಮಯ

ಶಿಬಿರಾರ್ಥಿಯ ಸಹಿ

ಅನುಬಂಧ-5 : ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಯ ಉತ್ತರಗಳು

* ಪೂರ್ವ ಪರೀಕ್ಷೆಯ ಉತ್ತರಗಳು:	* ಸಾಫಲ್ಯ ಪರೀಕ್ಷೆಯ ಉತ್ತರಗಳು:
1. ಬಿ) ಓದುವುದರ ಕಡೆಗೆ ಸೆಳೆಯುವುದು.	1. ಎ) ಜ್ಞಾನ ಭಂಡಾರ
2. ಸಿ) ಮಕ್ಕಳ ಕೈಗೆಟುವಂತೆ ಪುಸ್ತಕಗಳನ್ನು ಜೋಡಿಸಿಡುವುದು.	2. ಬಿ) ಗ್ರಂಥಾಲಯ
	3. ಬಿ) ವೃತ್ತ ಪತ್ರಿಕೆಗಳು
3. ಡಿ) ಮೇಲಿನ ಎಲ್ಲವೂ	4. ಡಿ) ಮೇಲಿನ ಎಲ್ಲವೂ
4. ಎ) ತೋರಿಕೆಯ ಗ್ರಂಥಾಲಯ	5. ಎ) ಬಣ್ಣ, ಚಿತ್ರ, ಗಾತ್ರ
5. ಎ) ಮಕ್ಕಳಿಗೆ ಪುಸ್ತಕಗಳನ್ನು ಓದಲು ಕೊಡುವುದು	6. ಎ) ಬಹು ಆಯಾಮದ ಕಲಿಕೆಗೆ ಸಿದ್ಧಪಡಿಸುವುದು
6. ಡಿ) ಎಲ್ಲಾ ಶಾಲೆಗಳಿಗೆ	7. ಎ) ಪುಸ್ತಕಗಳು ಅಮೂಲ್ಯ ಸಂಪತ್ತು ಅವುಗಳನ್ನು ಹಾಳು ಮಾಡದಿರಿ.
7. ಬಿ) ವಯೋಮಾನವಾರು	
8. ಎ) ಚಿತ್ರಗಳಿಂದ	8. ಬಿ) ಕಿಡ್ ಜೋನ್
9. ಸಿ) ವಿಜ್ಞಾನದ ವಿಸ್ಮಯಗಳು	9. ಬಿ) ತರಗತಿ ಗ್ರಂಥಾಲಯ
10. ಸಿ) ಗ್ರಂಥಾಲಯ ಪುಸ್ತಕ ವಿತರಣಾ ವಹಿ	10. ಬಿ) ಎಸ್.ಡಿ.ಎಂ.ಸಿ ನಿರ್ಣಯವಾಗಬೇಕು
11. ಎ) ನಿಯತಕಾಲಿಕೆಗಳು	11. ಎ) ಗಟ್ಟಿಯಾಗಿ ಓದುವುದು
12. ಬಿ) ಶೋಧ್ ಗಂಗಾ	12. ಡಿ) ಗ್ರಂಥಾಲಯ ಪುಸ್ತಕ ದಾಸ್ತಾನು ವಹಿ
13. ಎ) ಶಿಶು ಸ್ನೇಹಿಯಾಗಿರುವುದು	13. ಎ) ಏಪ್ರಿಲ್ ೨೩
14. ಬಿ) ಓದಿದ ಪುಸ್ತಕಗಳ ಬಗ್ಗೆ ಮಾತನಾಡುವುದು	14. ಡಿ) ಮೇಲಿನ ಎಲ್ಲರೂ
15. ಎ) ಕ್ರಮಸಂಖ್ಯೆ ಮತ್ತು ವರ್ಷ	15. ಸಿ) ಪ್ರಾರ್ಥನಾ ಸಮಯ

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.

ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129
ಇ–ಮೇಲ್ : sislepdirector.dwd@gmail.com